www.divinegen.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ - 8 ಸಂಚಿಕೆ - 8 ಆಗಸ್ಟ್ 2012
Volume : VIII Issue : VIII August 2012

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Devine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

ಒಳ ಪುಟಗಳಲ್ಲಿ

1. ಪ್ರಕಟಣೆ
2. ಸ್ವಾತಂತ್ರ್ಯ
3. ಬಲ ಹೊಂದಿಕೊ – ವಯಸ್ಕರ ಸ್ವರ
4. ಪ್ರಶ್ನೋತ್ತರಗಳ ಸ್ವರ
5. ಆರೋಗ್ಯ ಸ್ವರ
6. ಪುನರ್‌ಸ್ಥಾಪನೆ
7. ಅನಾಥರ ಸ್ವರ
8. ಮಕ್ಕಳ ಸ್ವರ
9. ಹಳೆಯ ಒಡಂಬಡಿಕೆಯ ಪುಸ್ತಕಗಳ ಸಂಗ್ರಹ
10. ದೇವರನ್ನೇ ಆತುಕೋ
11. ಪ್ರಾರ್ಥನಾ ಮನವಿಗಳು
12. ಸ್ಥಳೀಯ ಮತ್ತು ವಿದೇಶ ಸುದ್ಧಿ
13. ರೂತಳ ಪುಸ್ತಕ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಮಧುರ ನಾಮದಲ್ಲಿ ಪ್ರಿಯ ವಾಚಕರೆಲ್ಲರಿಗೂ ನನ್ನ ವಂದನೆಗಳು.

"ಆಕಾಶದ ಕೆಳಗೆ ಭೂಮಿಯ ಮೇಲೆ ರಕ್ಷಣೆಗಾಗಿ ಕೊಡಲ್ಪಟ್ಟಿರುವ ಒಂದೇ ಒಂದು ಹೆಸರು ಕರ್ತನಾದ ಯೇಸುಕ್ರಿಸ್ತನೆಂದು ತಿಳಿದುಕೊಳ್ಳುತ್ತೇವೆ. ರಕ್ಷಣೆ ಎಂದರೇನು? ಕಾಪಾಡುವುದು, ಬಿಡಿಸುವುದು, ತಪ್ಪಿಸುವುದು, ರಕ್ಷಿಸುವುದು, ಭದ್ರತೆ ಎಂದೆಲ್ಲಾ ಅರ್ಥ ಬರುತ್ತದೆ. ಯೇಸುಕ್ರಿಸ್ತನು ಪಾಪದ ಶಿಕ್ಷೆಯಿಂದ ನಮ್ಮನ್ನು ಮೊದಲನೆಯದಾಗಿ ರಕ್ಷಿಸುತ್ತಾನೆ. ಸತ್ಯವೇದ ಹೇಳುತ್ತದೆ, **"ಪಾಪದ ಸಂಬಳ ಮರಣ"** (ಪಾಪದ ಶಿಕ್ಷೆ ಮರಣ) (ರೋಮ. 6:23). ಎಂದು ಲೋಕದಲ್ಲಿ ತಾಯಿಯ ಗರ್ಭದಲ್ಲಿ ಹುಟ್ಟಿದ ಪ್ರತಿಯೊಬ್ಬ ವ್ಯಕ್ತಿಯು ಪಾಪಿಯಾಗಿದ್ದಾನೆ. ಮನುಷ್ಯನು ಜನ್ಮ ಪಾಪದಲ್ಲಿ ಹುಟ್ಟಿ ಕರ್ಮ ಪಾಪದಲ್ಲಿ ಜೀವಿಸುತ್ತಾನೆ. ಆದಕಾರಣ ಮನುಷ್ಯನು ಶರೀರ ಬಿಟ್ಟ ಕೂಡಲೇ ಪಾಪದ ಶಿಕ್ಷೆಯನ್ನು ಅನುಭವಿಸಲು ನರಕಕ್ಕೆ ಹೋಗಬೇಕಾಗುತ್ತದೆ. ಅಲ್ಲಿ ನಿತ್ಯಯಾತನೆ ತಪ್ಪಿದ್ದಲ್ಲ ಎಂದು ಸತ್ಯವೇದ ಹೇಳುತ್ತದೆ, ಮತ್ತಾ. 25:41-46, ದಾನಿ. 12:2, ಯೋಹಾ. 5:29, ಪ್ರಕ. 20:10-14, 19:20,14:10-11. ಒಬ್ಬ ಮನುಷ್ಯನು ಒಂದು ಸಲ ನರಕಕ್ಕೆ ಹೋದರೆ ಜೀವದಿಂದಿರುವ ಅವನ ಸಂಬಂಧಿಕರು ಅವನ ಆತ್ಮ ಶಾಂತಿಗಾಗಿ ಪೂಜೆ, ಪ್ರಾರ್ಥನೆ, ಕರ್ಮ, ಇನ್ನೇನೂ ಮಾಡಿದರೂ ನರಕದಲ್ಲಿರುವ ಆತ್ಮಕ್ಕೆ ಶಾಂತಿಕೊಟ್ಟು ಪರಲೋಕಕ್ಕೆ ಕಳುಹಿಸಲು ಸಾಧ್ಯವಿಲ್ಲವೆಂದು ಸತ್ಯವೇದ ಲೂಕ. 16:19-31ರಲ್ಲಿ ಹೇಳುತ್ತದೆ, ಆದಕಾರಣ 2 ಸಾವಿರ ವರ್ಷಗಳ ಹಿಂದೆ ಕರ್ತನಾದ ಯೇಸುಕ್ರಿಸ್ತನು ಮನುಷ್ಯನಾಗಿ ಈ ಲೋಕಕ್ಕೆ ಬಂದು ಮನುಷ್ಯನ ಪಾಪದ ಶಿಕ್ಷೆಯನ್ನು ತಾನೇ ತೆಗೆದುಕೊಂಡು ಸತ್ತು ಹೂಣಲ್ಪಟ್ಟು 3ನೇ ದಿನದಲ್ಲಿ ಎದ್ದು ಬಂದು ಮನುಷ್ಯನ ರಕ್ಷಣೆಗೆ (ಪಾಪದ ಶಿಕ್ಷೆಯಾದ ನಿತ್ಯ ನರಕದಿಂದ) ಮಾರ್ಗ ಸಿದ್ಧ ಮಾಡಿದನು. ಇಂದು ಯಾರೆಲ್ಲಾ ತಾವು ಪಾಪಿಗಳೆಂದು ತಿಳಿದು ತಮ್ಮ ತಮ್ಮ ಪಾಪದ ಶಿಕ್ಷೆಯನ್ನು ಅನುಭವಿಸಿ ತಮಗಾಗಿ ಕ್ರೂಜೆಯಲ್ಲಿ ಸತ್ತು ಹೂಣಲ್ಪಟ್ಟು 3ನೇ ದಿನದಲ್ಲಿ ಎದ್ದನು ಎಂದು ನಂಬಿ ಈ ಸತ್ಯವನ್ನು ಬಾಯಲ್ಲಿ ಅರಿಕೆ ಮಾಡಿ ಆತನು ತನ್ನ ಜೀವಿತದ ರಕ್ಷಕನು ಒಡೆಯನು ಎಂದು ಅಂಗೀಕರಿಸಿದರೆ ಆ ವ್ಯಕ್ತಿಗೆ ರಕ್ಷಣೆಯಾಗುವುದು ಎಂದು ಸತ್ಯವೇದ ತಿಳಿಸುತ್ತದೆ. ಇದನ್ನು ಓದುತ್ತಿರುವ ನೀನು ಯಾರೇ ಆಗಿರು ಯೇಸುಕ್ರಿಸ್ತನ ಮೂಲಕ ಸಿಗುವ ರಕ್ಷಣೆಯನ್ನು ಹೊಂದು. ಈ ಲೋಕವನ್ನು ನೀನು ತ್ಯಜಿಸಬಾರದು. 2ನೇಯದಾಗಿ ಈ ಯೇಸುಕ್ರಿಸ್ತನ ಮೂಲಕ ಸಿಗುವ ರಕ್ಷಣೆಯನ್ನು ಸಾರಿ ಪ್ರಸಿದ್ಧಿಪಡಿಸಲು ವಾಚಕರಾದ ನಮ್ಮೆಲ್ಲರನ್ನು ಕರ್ತನು ಆರಿಸಿದ್ದಾನೆ. ನಮ್ಮ ಜವಾಬ್ದಾರಿಯನ್ನು ಕೂಡ ನಾವು ಮರೆಯಬಾರದು.

ಕರ್ತನು ನಿಮ್ಮೆಲ್ಲರನ್ನು ಆಶೀರ್ವದಿಸಲಿ.



*ಹಿರಿಯ ಸಂಪಾದಕ*

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

## ಪುನರುತ್ಥಾನ ಹೊಂದಿದ ಕ್ರಿಸ್ತನ ಸಂದೇಶ

4) **ಸಭೆಯ ಒಯ್ಯಲ್ಪಡುವಿಕೆ :** ಯೇಸುಕ್ರಿಸ್ತನ ರಹಸ್ಯ ಬರೋಣದಲ್ಲಿ 1 ಥೆಸ. 4:13–18 ನಾವು ಕರ್ತನ ಮಾತಿನ ಆಧಾರದಿಂದ ನಿಮಗೆ ಹೇಳುವುದೇನಂದರೆ **"ಕರ್ತನು ಪ್ರತ್ಯಕ್ಷನಾಗುವವರೆಗೂ ಜೀವದಿಂದುಳಿದಿರುವ ನಾವು ನಿದ್ರೆ ಹೋದವರಿಗಿಂತ ಮುಂದಾಗುವುದೇ ಇಲ್ಲ. ಕರ್ತನು ತಾನೇ ಆಜ್ಞಾಘೋಷದೊಡನೆಯೂ ಪ್ರಧಾನ ದೂತನ ಶಬ್ದದೊಡನೆಯೂ ದೇವರ ತುತ್ತೂರಿ ಧ್ವನಿಯೊಡನೆಯೂ ಆಕಾಶದಿಂದ ಇಳಿದು ಬರುವನು; ಆಗ ಕ್ರಿಸ್ತನಲ್ಲಿರುವ ಸತ್ತವರು ಮೊದಲು ಎದ್ದು ಬರುವರು. ಆ ಮೇಲೆ ಜೀವದಿಂದುಳಿದಿರುವ ನಾವು ಅಂತರಿಕ್ಷದಲ್ಲಿ ಕರ್ತನನ್ನು ಎದುರುಗೊಳ್ಳುವದಕ್ಕಾಗಿ ಅವರ ಸಂಗಡಲೇ ಮೇಘವಾಹನರಾಗಿ ಫಕ್ಕನೇ ಒಯ್ಯಲ್ಪಡುವೆವು"** ಯಾವ ಪ್ರಕಾರ ಮೊದಲನೆಯ ಮನುಷ್ಯನಾದ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ, ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು (1 ಕೊರಿ. 15:20–22 ). ಹೀಗೆ ಉತ್ತರಿಸುತ್ತಾನೆ, 1 ಥೆಸ. 5:23 ಕ್ರಿಸ್ತನ ಪ್ರತ್ಯಕ್ಷತೆಯಲ್ಲಿ ಆತನವರು ಎದ್ದುಬರುವರು ಮೇಲಿನ ವಾಕ್ಯದಲ್ಲಿ ಕರ್ತನ ದ್ವಿತೀಯಾಗಮನದಲ್ಲಿ ಎರಡು ಗುಂಪಿನವರು ಅಂದರೆ ಕ್ರಿಸ್ತನಲ್ಲಿ ಸತ್ತವರು ಮತ್ತು ಕ್ರಿಸ್ತನಲ್ಲಿ ಜೀವದಿಂದುಳಿದವರು ಪಕ್ಕನೆ ಒಯ್ಯಲ್ಪಡುವರು ಎಂಬ ಆತ್ಮೀಕ ಸತ್ಯವನ್ನು ಪೌಲನು ತಿಳಿಸುತ್ತಿದ್ದಾನೆ.

5) **"ತರುವಾಯ ಸಿಂಹಾಸಗಳನ್ನು ಕಂಡೆನು. ಅವುಗಳ ಮೇಲೆ ಜನರು ಕೂತಿದ್ದರು; ನ್ಯಾಯತೀರಿಸುವ ಅಧಿಕಾರವು ಅವರಿಗೆ ಕೊಡಲ್ಪಟ್ಟಿತು. ಇದಲ್ಲದೆ ಯೇಸುವಿನ ವಿಷಯವಾದ ಸಾಕ್ಷಿಯ ನಿಮಿತ್ತವಾಗಿಯೂ ದೇವರ ವಾಕ್ಯದ ನಿಮಿತ್ತವಾಗಿಯೂ ತಲೆಹೊಯಿಸಿಕೊಂಡವರ ಆತ್ಮಗಳನ್ನೂ ಮೃಗಕ್ಕೂ ಅದರ ವಿಗ್ರಹಕ್ಕೂ ನಮಸ್ಕರಿಸದೆ ತಮ್ಮ ಹಣೆಯ ಮೇಲೆ ಮತ್ತು ಕೈಯ ಮೇಲೆ ಗುರುತು ಹಾಕಿಸಿಕೊಳ್ಳದೆ ಇರುವವರನ್ನೂ ಕಂಡೆನು. ಅವರು ಜೀವಿತರಾಗಿ ಎದ್ದು ಸಾವಿರ ವರುಷ ಕ್ರಿಸ್ತನೊಂದಿಗೆ ಆಳಿದರು. ಮಿಕ್ಕ ಸತ್ತವರು ಆ ಸಾವಿರ ವರ್ಷ ತೀರುವ ತನಕ ಜೀವಿತರಾಗಿ ಏಳಲಿಲ್ಲ. ಇದೇ ಪ್ರಥಮ ಪುನರುತ್ಥಾನವು"** (ಪ್ರಕ. 20:4). ಸಂಕಟ ಕಾಲದಲ್ಲಿ ಅನೇಕರು ನಂಬಿಕೆಗಾಗಿ ರಕ್ತಸಾಕ್ಷಿಗಳಾಗಿ ಸಾಯುವರು. 666 ನಂಬರ್ ಹಣೆಯ ಮೇಲೆ ಹಾಗೂ ಬಲಗೈಯ ಮೇಲೆ ಯಾರೂ ಹಾಕಿಸಿಕೊಳ್ಳುವುದಿಲ್ಲ ಅಂಥವರನ್ನು ಕ್ರಿಸ್ತವಿರೋಧಿ ಹಿಂಸಿಸಿ ಕೊನೆಗೆ ತಲೆ ಕಡಿದು ಸಾಯಿಸುತ್ತಾನೆ. **"ಇದಲ್ಲದೆ ಆ ಮೃಗದ ವಿಗ್ರಹಕ್ಕೆ ಜೀವಕೊಡುವ ಸಾಮರ್ಥ್ಯವು ಇದಕ್ಕೆ ದೊರೆಯಿತು. ಆ ಮೃಗದ ವಿಗ್ರಹವು ಮಾತಾಡುವದು; ತನಗೆ ನಮಸ್ಕರಿಸದವರೆಲ್ಲರಿಗೂ ಮರಣದಂಡನೆ ಆಗುವಂತೆ ಮಾಡುವದು. ಈ ಎರಡನೆಯ ಮೃಗವು ದೊಡ್ಡವರು ಚಿಕ್ಕವರು ಐಶ್ವರ್ಯವಂತರು ಬಡವರು ಸ್ವತಂತ್ರರು ದಾಸರು ಎಲ್ಲರೂ ತಮ್ಮ ತಮ್ಮ ಬಲಗೈಯ ಮೇಲಾಗಲಿ ಹಣೆಯ ಮೇಲಾಗಲಿ ಗುರುತು ಹೊಂದಬೇಕೆಂತಲೂ ಆ ಗುರುತು ಯಾರಿಗಿಲ್ಲವೋ ಅವರು ಕ್ರಯ ವಿಕ್ರಯಗಳನ್ನು ನಡಿಸಕೂಡದೆಂತಲೂ ಆಜ್ಞೆ ಮಾಡುತ್ತದೆ. ಆ ಗುರುತು ಯಾವದಂದರೆ ಮೊದಲನೆಯ ಮೃಗದ ಹೆಸರು ಅಥವಾ ಅದರ ಹೆಸರನ್ನು ಸೂಚಿಸುವ ಅಂಕೆ"** (ಪ್ರಕ. 13:15–17). ಹೀಗೆ ಸಂಕಟಕಾಲದಲ್ಲಿ ರಕ್ತಸಾಕ್ಷಿಗಳಾದ ಭಕ್ತರು ಸಂಕಟಕಾಲದ ಕೊನೆಯಲ್ಲಿ ಹರ್ಮಗೆದೋನ್ ಯುದ್ಧದ ನಂತರ ಸಾವಿರ ವರುಷದ ಆಳ್ವಿಕೆಗೆ ಮುಂಚೆ ಪುನರುತ್ಥಾನವಾಗಿ ಏಳುವರು **"ಅವನ ಹಿಂದೆ ಮೂರನೆಯವನಾದ ಒಬ್ಬ ದೇವದೂತನು ಬಂದು ಯಾವನಾದರೂ ಮೊದಲನೆಯ ಮೃಗಕ್ಕೂ ಅದರ ವಿಗ್ರಹಕ್ಕೂ ನಮಸ್ಕಾರಮಾಡಿ ತನ್ನ ಹಣೆಯ ಮೇಲಾಗಲಿ ಕೈಯ ಮೇಲಾಗಲಿ ಗುರುತುಹಾಕಿಸಿಕೊಂಡರೆ ಅವನು ಸಹ ದೇವರ ಕೋಪವೆಂಬ ಪಾತ್ರೆಯಲ್ಲಿ ಏನೂ ಬೆರಸದೆ ಹಾಕಿದ ದೇವರ ರೌದ್ರವೆಂಬ ದ್ರಾಕ್ಷಾರಸವನ್ನು ಕುಡಿಯುವನು; ಪರಿಶುದ್ಧದೇವದೂತರ ಮುಂದೆಯೂ ಬೆಂಕಿಯಿಂದಲೂ ಗಂಧಕದಿಂದಲೂ ಯಾತನೆಪಡುವನು. ಅಂಥವರ ಯಾತನೆಯ ಹೊಗೆಯು ಯುಗಯುಗಾಂತರಗಳಲ್ಲಿಯೂ ಏರುತ್ತಾ ಹೋಗುತ್ತದೆ; ಮೃಗಕ್ಕೆ ಮತ್ತು ಅದರ ವಿಗ್ರಹಕ್ಕೆ ನಮಸ್ಕಾರಮಾಡುವವರೂ ಅದರ ಹೆಸರನ್ನು ಸೂಚಿಸುವ**

ನಿನ್ನ ಬಾಯಲ್ಲಿ ನನ್ನ ಮಾತುಗಳನ್ನು ಇಟ್ಟು ನನ್ನ ಕೈಯ ನೆರಳಿನಲ್ಲಿ ನಿನ್ನನ್ನು ಹುದುಗಿಸಿದ್ದೇನೆ (ಯೆಶಾ. 51:16).

**ಗುರುತನ್ನು ಹಾಕಿಸಿಕೊಂಡಿರುವವರೆಲ್ಲರೂ ಹಗಲಿರುಳು ಉಪಶಮನವಿಲ್ಲದೆ ಯಾತನೆಪಡುವರು ಎಂದು ಮಹಾ ಶಬ್ದದಿಂದ ಹೇಳಿದನು.ಇದರಲ್ಲಿ ದೇವರ ಆಜ್ಞೆಗಳನ್ನೂ ಯೇಸುವಿನ ಮೇಲಣ ನಂಬಿಕೆಯನ್ನೂ ಕೈಕೊಂಡು ನಡೆಯುತ್ತಿರುವ ದೇವಜನರ ತಾಳ್ಮೆಯು ತೋರಿಬರುತ್ತದೆ"** (ಪ್ರಕ. 14:9–12).

**ಕಡೇ ಅಥವಾ ಎರಡನೇ ಪುನರುತ್ಥಾನ ದುಷ್ಟರ ಪುನರುತ್ಥಾನ:**

1) **"ಒಳ್ಳೇದನ್ನು ಮಾಡಿದವರಿಗೆ ಜೀವಕ್ಕಾಗಿ ಪುನರುತ್ಥಾನ ವಾಗುವದು; ಕೆಟ್ಟದ್ದನ್ನು ನಡಿಸಿದವರಿಗೆ ತೀರ್ಪಿಗಾಗಿ ಪುನರುತ್ಥಾನವಾಗುವದು"** (ಯೋಹಾ. 5:29, ದಾನಿ. 12:2). ನಾವು ಮೇಲಿನ ವಾಕ್ಯಗಳಲ್ಲಿ ಧ್ಯಾನಿಸಿದ ವಿವಿಧ ಪುನರುತ್ಥಾನಗಳಲ್ಲಿ ಇಲ್ಲದ ಜನರಿವರು. ಇವರ ಪುನರುತ್ಥಾನವನ್ನು ಪೌಲನು ಅನೀತಿವಂತರ ಪುನರುತ್ಥಾನವೆಂದು ಕರೆಯುತ್ತಿದ್ದಾನೆ. ಅ.ಕೃ. 24:15 ಇದು ಸಾವಿರ ವರ್ಷಗಳ ಆಳ್ವಿಕೆಯ ನಂತರ ನಡೆಯುತ್ತದೆ. ಪ್ರಕ. 20:11–15ರಲ್ಲಿ ಆದಿಕಾಂಡದಿಂದ ಪ್ರಕಟಣೆಯವರೆಗೆ ರಕ್ಷಣೆ ಇಲ್ಲದೆ ಸತ್ತು ಪಾತಾಳದೊಳಗಿನ ಉಪದ್ರವಸ್ಥಳದಲ್ಲಿ (torment place)ನಲ್ಲಿ ಯಾತನೆಯನ್ನು ಅನುಭವಿಸುತ್ತಾ ಇದ್ದಂತಹ ಆತ್ಮಗಳೇ ಇವುಗಳಾಗಿವೆ. ಬಿಳಿ ಸಿಂಹಾಸನದ ನ್ಯಾಯತೀರ್ಪಿಗಾಗಿ ಇವರು ಪುನರುತ್ಥಾನರಾಗಿ ನ್ಯಾಯತೀರ್ಪಿನ ನಂತರ ಉಪದ್ರವ ಸ್ಥಳಕ್ಕಿಂತಲೂ ಘೋರವಾದ ಅಗ್ನಿ ಕಡಲು ನಿಜವಾದ ನರಕಕ್ಕೆ ಇವರು ದೊಬ್ಬಲ್ಪಡುವರು. ಇದು ನಿತ್ಯಯಾತನೆ, ನಿತ್ಯ ಶಿಕ್ಷೆಯಾಗಿದೆ. ಈ ಆತ್ಮಗಳ ಶಾಂತಿಗೆ ಜೀವದಿಂದಿರುವವರು ಪ್ರಾರ್ಥನೆ, ಪೂಜೆಸಲ್ಲಿಸಿ ಶಾಂತಿ ದೊರಕಿಸಿ ಕೊಡಲು ಸಾಧ್ಯವಿಲ್ಲ. ಜೀವದಿಂದಿರುವಾಗ ಪಾಪದ ಶಿಕ್ಷೆಯಿಂದ ಬಿಡುಗಡೆ ಮಾಡಲು ಮಾನವನಾಗಿ ಈ ಲೋಕಕ್ಕೆ ಬಂದು ಶಿಲುಬೆಯಲ್ಲಿ ಪ್ರಾಣ ಕೊಟ್ಟು ಹೂಣಲ್ಪಟ್ಟು 3ನೆಯ ದಿನದಲ್ಲಿ ಎದ್ದು ಬಂದಂತಹ ಕರ್ತನಾದ ಯೇಸುವನ್ನು ನಂಬಿ ರಕ್ಷಕನಾಗಿ ಅಂಗೀಕರಿಸಿ ಸಾಯುವುದಾದರೆ ಪರಲೋಕ ನಿಶ್ಚಯ.

**ಪುನರುತ್ಥಾನಗೊಂಡ ದೇಹವು ಯಾವ ರೀತಿಯಲ್ಲಿರುತ್ತದೆ?**

ಮನುಷ್ಯನ ದೇಹವು ಪುನರುತ್ಥಾನಗೊಳ್ಳುತ್ತದೆಂದು ಸತ್ಯವೇದವು ಸ್ಪಷ್ಟವಾಗಿ ಹೇಳುತ್ತದೆ, ಇದರ ಕುರಿತು 1ಕೊರಿ. 15:42–44ರಲ್ಲಿ **"ಸತ್ತವರಿಗಾಗುವ ಪುನರುತ್ಥಾನವು ಅದೇ ಪ್ರಕಾರವಾಗಿರುವದು. ದೇಹವು ಲಯಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ನಿರ್ಲಯಾವಸ್ಥೆಯಲ್ಲಿ ಎದ್ದುಬರುವದು; ಹೀನಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ಮಹಿಮೆಯಲ್ಲಿ ಎದ್ದುಬರುವದು; ನಿರ್ಬಲಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ಬಲಾವಸ್ಥೆಯಲ್ಲಿ ಎದ್ದುಬರುವದು; ಪ್ರಾಕೃತ ದೇಹವಾಗಿ ಬಿತ್ತಲ್ಪಡುತ್ತದೆ, ಆತ್ಮೀಕ ದೇಹವಾಗಿ ಎದ್ದುಬರುವದು. ಪ್ರಾಕೃತ ದೇಹವಿರುವದಾದರೆ ಆತ್ಮೀಕ ದೇಹವೂ ಇರುವದು"**. ಪುನರುತ್ಥಾನ ಶರೀರದ ನಿಜರೂಪವನ್ನು ಸತ್ಯವೇದದ ಮೂಲಕ ನಾವು ಕಲಿಯಬಹುದು ಪುನರುತ್ಥಾನ ಶರೀರವು ಆತ್ಮೀಕ ಶರೀರವಾಗಿರುತ್ತದೆ, ಅದು ಪ್ರಾಕೃತವಾಗಿರುತ್ತದೆ.

1. **ಪುನರುತ್ಥಾನಗೊಂಡ ಯೇಸುಕ್ರಿಸ್ತನ ಶರೀರದಂತೆ ಇರುತ್ತದೆ: "ನನ್ನನ್ನು ಮುಟ್ಟಿ ನೋಡಿರಿ, ನಿಮಗೆ ಕಾಣುವ ಪ್ರಕಾರ ನನಗೆ ಮಾಂಸವೂ ಎಲುಬುಗಳೂ ಉಂಟು"** (ಲೂಕ. 24:39).

2. **ಪುನರುತ್ಥಾನಗೊಂಡ ಶರೀರಕ್ಕೆ ವಿಮೋಚನೆಯಾಗುತ್ತದೆ : "ಜಗತ್ತೆಲ್ಲಾ ಇಂದಿನವರೆಗೂ ನರಳುತ್ತಾ ಪ್ರಸವವೇದನೆಪಡುತ್ತಾ ಇರುತ್ತದೆಂದು ನಾವು ಬಲ್ಲೆವು. ಇದು ಮಾತ್ರವಲ್ಲದೆ ಪ್ರಥಮ ಫಲವಾಗಿರುವ ಪವಿತ್ರಾತ್ಮ ವರವನ್ನು ಹೊಂದಿದ ನಾವಾದರೂ ದೇವಪುತ್ರರ ಪದವಿಯನ್ನು ಅಂದರೆ ದೇಹಕ್ಕೆ ಬರಬೇಕಾದ ವಿಮೋಚನೆಯನ್ನು ಎದುರುನೋಡುತ್ತಾ ನಮ್ಮೊಳಗೆ ನರಳುತ್ತೇವೆ"** (ರೋಮ. 8:22–23). ನಮ್ಮ ಆತ್ಮಕ್ಕೆ ಮಾತ್ರವಲ್ಲ ಶರೀರಕ್ಕೂ ವಿಮೋಚನೆಯಿದೆ. ಕ್ರಿಸ್ತನು ಶರೀರದಲ್ಲಿ ಸತ್ತು ಅಮರತ್ವವನ್ನು ಹೊಂದಿಕೊಂಡಂತೆ ನಾವೂ ಶಾರೀರಿಕವಾಗಿ ಸತ್ತು ಪುನರುತ್ಥಾನ ಹೊಂದಿ ಆತ್ಮೀಕ ಶರೀರವನ್ನು ಹೊಂದಿಕೊಳ್ಳುತ್ತೇವೆ. ಲಯವಾದ ನಮ್ಮ ಶರೀರ ರೂಪಾಂತರ ಹೊಂದಿ ನಿರ್ಲಯತ್ವವನ್ನು ಧರಿಸಿಕೊಳ್ಳುತ್ತದೆ. ಈ ಶರೀರವು ಅಮರತ್ವವುಳ್ಳದ್ದು ನಾಶವಾಗುವಂತದ್ದಲ್ಲ, ಇದು ಮಹಿಮೆಯ ಶರೀರವಾಗಿದೆ.

ಮುಂದುವರಿಯುವದು.....

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

ನನ್ನ ರಕ್ಷಣೆಯು ತಡವಾಗದು; ಚೀಯೋನಿನಲ್ಲಿ ರಕ್ಷಣಾ ಕಾರ್ಯವನ್ನು ನಡಿಸಿ ಇಸ್ರಾಯೇಲಿಗೆ ನನ್ನ ಮಹಿಮೆಯನ್ನು ದಯಪಾಲಿಸುವೆನು (ಯೆಶಾ. 46:13).

# ಸ್ವಾತಂತ್ರ್ಯ

ಕ್ರಿಸ್ತನಲ್ಲಿ ಪ್ರೀತಿಯ ಸಹೋದರ ಸಹೋದರಿಯರೇ, ನಿಮಗೆಲ್ಲರಿಗೂ ಯೇಸುಕ್ರಿಸ್ತನ ಮಧುರ ನಾಮದಲ್ಲಿ ನನ್ನ ವಂದನೆಗಳು ಹಾಗೂ ಸ್ವತಂತ್ರ ದಿನಾಚರಣೆಯ ಶುಭಾಶಯಗಳು.

ನಮ್ಮ ದೇಶಕ್ಕೆ ಸ್ವತಂತ್ರ ಸಿಕ್ಕಿ ಸುಮಾರು 65 ವರ್ಷಗಳಾದವು. ಆದರೆ ಇವತ್ತು ನಮ್ಮ ದೇಶದಲ್ಲಿ ಅ ಸ್ವತಂತ್ರದ ಅನುಭವವನ್ನು ದೇಶದ ಜನತೆಗೆ ಅನುಭವಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಕಾರಣ ಭ್ರಷ್ಟಚಾರ, ಅನೀತಿ, ಸುಲಿಗೆ, ಹಗಲು ದರೋಡೆ ಇವೆಲ್ಲಾ ಸಂಗತಿಗಳನ್ನು ನೋಡುವಾಗ ನಮ್ಮ ದೇಶಕ್ಕೆ ಸ್ವತಂತ್ರ ಸಿಕ್ಕಿದೆಯೋ ಎಂದು ಒಮ್ಮೆ ಸಂಶಯ ಬರುತ್ತದೆ. ದು:ಖಪಡುವವರು ದು:ಖಪಡುತ್ತಿದ್ದಾರೆ, ಬಡವರು ಬಡವರಾಗಿ ಸಾಯುತ್ತಿದ್ದಾರೆ, ದರೋಡೆ ಮಾಡುವವರು ದರೋಡೆ ಮಾಡುತ್ತಿದ್ದಾರೆ. ಈ ಸ್ವತಂತ್ರ ದಿನಾಚರಣೆಯ ಸಂದರ್ಭದಲ್ಲಿ ನಮ್ಮ ದೇಶವನ್ನು ಭ್ರಷ್ಟಚಾರ ಮುಕ್ತ ದೇಶವನ್ನಾಗಿ ಮಾರ್ಪಡಿಸಲು ಕರ್ತನಲ್ಲಿ ಪ್ರಾರ್ಥಿಸೋಣ. ಹೀಗೆ 65 ವರ್ಷಗಳ ಹಿಂದೆ ಬ್ರಿಟಿಷರ ದೊರೆತನದಿಂದ ಸ್ವತಂತ್ರ ಸಿಕ್ಕಿತೇ ಹಾಗೆಯೇ ಕೆಲವು ಸಂಗತಿಗಳಿಂದ ನಮ್ಮನ್ನು ಬಿಡುಗಡೆಮಾಡಿ ಸ್ವತಂತ್ರರನ್ನಾಗಿಸಲು ಕರ್ತನಾದ ಯೇಸುಕ್ರಿಸ್ತನು ಮಾನವನಾಗಿ ಬಂದನು ಅದನ್ನು ನಾವು ಸ್ವಲ್ಪ ಹೊತ್ತು ಧ್ಯಾನಿಸುವ.

**1) ಪಾಪದಿಂದ (ಮತ್ತಾ. 1:21) :**

ಮನುಷ್ಯನ ಅತೀ ದೊಡ್ಡ ಸಮಸ್ಸೆ ಪಾಪವಾಗಿದೆ. ಯಾಕೆಂದರೆ ಯೋಹಾ. 8:34ರಲ್ಲಿ ಪಾಪ ಮಾಡುವವನು ಪಾಪಕ್ಕೆ ದಾಸನು ಎಂದು ಹೇಳುತ್ತದೆ, ಈ ಲೋಕದಲ್ಲಿ ಪಾಪವಿಲ್ಲದ ಮನುಷ್ಯನೇ ಇಲ್ಲಾ. ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಕಳೆದುಕೊಂಡಿದ್ದಾರೆ ಎಂದು ಹೇಳುತ್ತದೆ (ರೋಮ. 3:23). ಅನೇಕರು ಪಾಪದಿಂದ ಬಿಡುಗಡೆ ಹೊಂದಲು ನಾನಾ ವಿಧವಾದ ಪ್ರಯತ್ನಗಳನ್ನು ಮಾಡುತ್ತಾರೆ. ಆದರೆ ಪಾಪದ ಮೇಲೆ ಜಯ ಹೊಂದಲು ಯಾರಿಗೂ ಸಾಧ್ಯವಾಗುವುದಿಲ್ಲ. ಆದರೆ ಕರ್ತನಾದ ಯೇಸುಕ್ರಿಸ್ತನು ಪಾಪದ ಜೀವಿತದಿಂದ ಬಿಡುಗಡೆಯನ್ನು ಆತನ ಬಳಿಗೆ ಬರುವವರಿಗೆ ಕೊಡುತ್ತಾನೆ. ಅನೇಕರು ನನ್ನ ಬಳಿಯಲ್ಲಿ ಈ ಕುಡುತನದಿಂದ ನನಗೆ ಹೊರಗೆ ಬರಬೇಕು, ಈ ವ್ಯಭಿಚಾರ ಪಾಪದಿಂದ ಹೊರಗೆ ಬರಬೇಕು, ಈ ಹೊಲಸಾದ ಜೀವಿತದಿಂದ ಹೊರಗೆ ಬರಬೇಕು ಆದರೆ ಸಾಧ್ಯವಾಗುತ್ತಿಲ್ಲ ಎಂದು ಹೇಳುತ್ತಾರೆ. ಯೋಹಾ. 8:1–11ರಲ್ಲಿ ಒಬ್ಬ ವ್ಯಭಿಚಾರ ಪಾಪ ಮಾಡುವಾಗ ಸಿಕ್ಕಿದ ಸ್ತ್ರೀಯನ್ನು ಶಾಸ್ತ್ರಿ ಫರಿಸಾಯರು ಅವರ ಧರ್ಮಶಾಸ್ತ್ರ ಹೇಳುವ ಪ್ರಕಾರ ಕಲ್ಲೆಸೆದು ಕೊಲ್ಲಲು ಯೇಸುಕ್ರಿಸ್ತನ ಬಳಿಗೆ ಬಂದವರು ಅವರಿಗೆ ಧರ್ಮಶಾಸ್ತ್ರದ ಮೇಲೆ ಪ್ರೀತಿಯಾಗಲಿ ಆ ಸ್ತ್ರೀಯ ಮೇಲೆ ದ್ವೇಷವಾಗಲಿ ಇರಲಿಲ್ಲ ಹೇಗಾದರೂ ಯೇಸುಕ್ರಿಸ್ತನನ್ನು ಸಿಕ್ಕಿಸಬೇಕೆಂಬ ಉದ್ದೇಶದಿಂದ ಯೇಸು ಕ್ರಿಸ್ತನ ಬಳಿಗೆ ಬಂದರು. ಯೇಸು ಕ್ರಿಸ್ತನು ದಯಾಳುವಾಗಿದ್ದನು. ಯೇಸುಕ್ರಿಸ್ತನು ಅವರಿಗೆ ಕಲ್ಲು ಎಸೆದು ಕೊಂದು ಹಾಕಿ ಎಂದು ಹೇಳಿದರೆ ಪ್ರೀತಿ ಇಲ್ಲದವನು ಎಂದು ಆರೋಪ ಹೊರಿಸುತ್ತಿದ್ದರು. ಒಂದು ವೇಳೆ ಕ್ಷಮಿಸಿ ಅಂಥ ಹೇಳಿದರೆ ಧರ್ಮಶಾಸ್ತ್ರಕ್ಕೆ ವಿರುದ್ಧ ಹೋಗುತ್ತಿದ್ದಾನೆ ಎಂದು ಹೇಳುತ್ತಿದ್ದರು. ಯೇಸುಕ್ರಿಸ್ತನು ಅವರಿಗೆ ನಿಮ್ಮಲ್ಲಿ ಪಾಪ ಮಾಡದವನು ಯಾರಾದರೂ ಇದ್ದರೆ ಅವನು ಅವಳ ಮೇಲೆ ಮೊದಲ ಕಲ್ಲು ಎಸೆಯಲಿ ಎಂದು ಹೇಳಿದನು ಮತ್ತು ನೆಲದ ಮಣ್ಣಿನಲ್ಲಿ ಏನೋ ಬರೆಯಲು ಶುರು ಮಾಡಿದನು ಅಲ್ಲಿದ್ದ ಚಿಕ್ಕವರಿಂದ ದೊಡ್ಡವರ ತನಕ ಎಲ್ಲರೂ ಹೋದರು. ಆಗ ಅಲ್ಲಿ ಉಳಿದಿದ್ದು ಯೇಸು ಹಾಗೂ ವ್ಯಭಿಚಾರದ ಆರೋಪ ಹೊತ್ತ ಆ ಸ್ತ್ರೀ ಮಾತ್ರ ಯೇಸು ಅವಳಿಗೆ ಯಾರೂ ನಿನ್ನ ಮೇಲೆ ಕಲ್ಲು ಎಸೆಯಲಿಲ್ಲವೇ ಎಂದು ಕೇಳಿದ್ದಕ್ಕೆ ಇಲ್ಲಾ ಸ್ವಾಮಿ ಅಂದರೆ ನಾನು ನಿನ್ನ ಮೇಲೆ ಕಲ್ಲು ಎಸೆಯುವುದಿಲ್ಲ ಹೋಗು ಇನ್ನು ಮೇಲೆ ಪಾಪಮಾಡಬೇಡ ಎಂದು ಹೇಳಿ ಕಳುಹಿಸಿದನು. ಅಲ್ಲಿಂದ ಅವಳ ಜೀವಿತವೇ ಬದಲಾಯಿತು.

ನನ್ನ ಪ್ರೀತಿಯ ಸಹೋದರನೇ, ಸಹೋದರಿಯೇ ಇಂದು ಯಾವುದೇ ವಿಧವಾದ ಪಾಪದಲ್ಲಿ ಸಿಕ್ಕಿಕೊಂಡು ಅದರಿಂದ ಹೊರಗೆ ಬರಲು ಬಯಸಿ ಹೊರಗೆ ಬರಲಾಗದೇ ಸೋತು ಹೋಗಿರುವಿಯಾದರೆ ನಿನಗೊಂದು ಶುಭಸಂದೇಶ ಕರ್ತನಾದ ಯೇಸುಕ್ರಿಸ್ತನು ನಿನಗೆ ಪಾಪದಿಂದ ಹೊರಗೆ ಬರಲು ಸಹಾಯಮಾಡುತ್ತಾನೆ. ಯೋಹಾ. 8:36 ಮಗನು ನಿಮ್ಮನ್ನು ಬಿಡುಗಡೆ ಮಾಡಿದರೆ ಶಾಶ್ವತ ಬಿಡುಗಡೆ. ಯೇಸುವನ್ನು ಈ ಪರಿಸ್ಥಿತಿಯಲ್ಲಿ ಕೂಗಿ ಕರೆ ಆತನು ನಿಶ್ಚಯವಾಗಿ ನಿನ್ನನ್ನು ಬಂಧಿಸಿ ನಿನ್ನೊಂದಿಗೆ ಹೋರಾಡುವ ಪಾಪದ ಬಂಧನದಿಂದ ನಿನ್ನನ್ನು ಬಿಡಿಸಿ ಪರಿಶುದ್ಧ ಮಾರ್ಗದಲ್ಲಿ ನಡೆಸುವನು.

**"ನನ್ನ ಪ್ರಾಣವನ್ನು ಉಜ್ಜೀವಿಸಮಾಡಿ ಆತನ ಹೆಸರಿಗೆ ತಕ್ಕಂತೆ ನನ್ನನ್ನು ನೀತಿಮಾರ್ಗದಲ್ಲಿ ನಡೆಸುವನು"** (ಕೀರ್ತ. 23:3).

2) ಆತ್ಮೀಕ ಮರಣದಿಂದ (ಯೋಹಾ. 5:24). 3 ವಿಧವಾದ ಮರಣಗಳಿವೆ.

1. ಆತ್ಮ ಮರಣ 2. ಶರೀರ ಮರಣ 3. ನಿತ್ಯ ಮರಣ.

**1. ಆತ್ಮ ಮರಣ :–** ಮನುಷ್ಯನು ಶರೀರದಲ್ಲಿ ಆತ್ಮವಾಗಿದ್ದಾನೆ. ಆದಿ. 1:26 ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟು ಮಾಡಿದನು. ದೇವರ ಸ್ವರೂಪ ಯಾವುದು? ಯೋಹಾ. 4:24 ದೇವರು ಆತ್ಮ ಸ್ವರೂಪವಾಗಿದ್ದಾನೆ. ಆದಿ. 2:15–17 ಏದೆನಿನಲ್ಲಿ ದೇವರು ಮನುಷ್ಯನಿಗೆ ಒಳಿತು ಕೆಡುಕಿನ ಅರಿವನ್ನುಂಟು ಮಾಡುವ

ಯೆಹೋವನು ಆನಂದಿಸುವದು ತನ್ನ ಕೃಪೆಯನ್ನು ನಿರೀಕ್ಷಿಸುವ ಭಕ್ತರಲ್ಲೇ
(ಕೀರ್ತ. 147:11).

ಮರದ ಹಣ್ಣನ್ನು ತಿಂದರೆ ಅದೇ ದಿನ ಸತ್ತು ಹೋಗುವಿ ಎಂದು ಹೇಳಿದನು. ಆದಿ. 3:1–8ರಲ್ಲಿ ಸರ್ಪದ ವಂಚನೆಗೆ ಒಳ ಬಿದ್ದು ಆದಾಮ ಹವ್ವರು ಆ ಹಣ್ಣನ್ನು ತಿಂದರು. ಅವರು ಶರೀರದಲ್ಲಿ ಸಾಯಲಿಲ್ಲ ಆತ್ಮದಲ್ಲಿ ಸತ್ತು ಹೋದರು.

**ಆತ್ಮ ಮರಣ ಎಂದರೇನು ?**

ಮನುಷ್ಯನು ತನ್ನ ಪಾಪದ ನಿಮಿತ್ತವಾಗಿ ದೇವರ ಅನ್ಯೋನ್ಯತೆಯನ್ನು ಕಳಕೊಂಡಿರುವ ಸ್ಥಿತಿಗೆ ಆತ್ಮ ಮರಣವೆನ್ನುತ್ತಾರೆ. ಆತ್ಮದಲ್ಲಿ ಸತ್ತವನು ಪವಿತ್ರ ದೇವರ ಅನ್ಯೋನ್ಯತೆ ಹಾಗೂ ಸಂಬಂಧ ಹೊಂದಲು ಸಾಧ್ಯವಿಲ್ಲ. ಆದಾಮ ಹವ್ವರು ಪಾಪಮಾಡಿದಾಗ ಆತ್ಮದಲ್ಲಿ ಸತ್ತದ್ದರಿಂದ ಅದರ ನಂತರ ದೇವರ ಅನ್ಯೋನ್ಯತೆಯನ್ನು ಹಾಗೂ ಸಂಬಂಧವನ್ನು ಕಳೆದುಕೊಂಡ ಅವರಿಗೆ ಪರಿಶುದ್ಧ ದೇವರ ಮುಂದೆ ನಿಂತುಕೊಳ್ಳಲು ಸಾಧ್ಯವಾಗಲಿಲ್ಲ. ಇಂದು ಆದಾಮ ಹವ್ವರ ಪಾಪದ ಮೂಲಕವಾಗಿ ಕಳಕೊಂಡ ದೇವರ ಅನ್ಯೋನ್ಯತೆ ಸಂಬಂಧವನ್ನು ತಿರುಗಿ ಪಡಕೊಳ್ಳಲು ತಂದೆಯಾದ ದೇವರು ಕರ್ತನಾದ ಯೇಸುಕ್ರಿಸ್ತನ ಮೂಲಕವಾಗಿ ಒಂದು ಮಾರ್ಗವನ್ನು ಸಿದ್ಧಮಾಡಿದ್ದಾನೆ. ಅದೇನೆಂದರೆ ಮನುಷ್ಯನು ತನ್ನ ಆತ್ಮೀಕ ಸ್ಥಿತಿಯನ್ನು ತಿಳಿದಕೊಂಡು ತಾನು ಪಾಪಿಯಾಗಿದ್ದೇನೆ. ತನಗೆ ಪಾಪಕ್ಕೆ ಪಶ್ಚಾತ್ತಾಪದ ಅವಶ್ಯಕತೆ ಇದೆ. ತನ್ನ ಪಾಪಕ್ಕೆ ಕ್ಷಮೆಬೇಕು ಎಂದು ತಿಳಿದುಕೊಂಡು ದೇವರ ಬಳಿಗೆ ಹೋಗಿ ತನ್ನ ಪಾಪಗಳಿಗಾಗಿ ಪಶ್ಚಾತ್ತಾಪಟ್ಟು ದೇವರ ಬಳಿ ಕ್ಷಮೆ ಕೇಳಿ ಕರ್ತನಾದ ಯೇಸುಕ್ರಿಸ್ತನು ತನ್ನ ಪಾಪದ ಶಿಕ್ಷೆಯನ್ನು, ತನ್ನ ಸ್ಥಳದಲ್ಲಿ ತೆಗೆದುಕೊಂಡು ತಾನು ಸಾಯುವ ಸ್ಥಳದಲ್ಲಿ ಯೇಸುಕ್ರಿಸ್ತನು ಸತ್ತು ಹೂಣಲ್ಪಟ್ಟು ಮೂರನೆಯ ದಿನದಲ್ಲಿ ಎದ್ದು ಬಂದನು ಎಂದು ನಂಬಿ ಬಾಯಲ್ಲಿ ಅರಿಕೆ ಮಾಡಿ ಆತನನ್ನು ತನ್ನ ಜೀವಿತದ ರಕ್ಷಕನು ಒಡೆಯನು ಆಗಿ ಅಂಗೀಕರಿಸಿದರೆ ಸತ್ತಂತಹ ಆತ್ಮಕ್ಕೆ ಜೀವ ಬಂದು ಪರಿಶುದ್ಧ ದೇವರೊಂದಿಗೆ ಅನ್ಯೋನ್ಯತೆ ಹೊಂದಿ ಹಾಗೂ ಮಗುವಿನ ಸಂಬಂಧ ಪಡೆದು ನಿತ್ಯಜೀವಕ್ಕೆ ಬಾಧ್ಯನಾಗಲು ಸಾಧ್ಯ.

**"ಆದಕಾರಣ ನಿರಾಪರಾಧಿಯೆಂದು ನಮ್ಮ ಮನಸ್ಸು ನಮಗೆ ಸಾಕ್ಷಿ ಹೇಳದಂತೆ ನಾವು ಹೃದಯವನ್ನು ಪ್ರೋಕ್ಷಿಸಿಕೊಂಡು ದೇಹವನ್ನು ತಿಳಿನೀರಿನಿಂದ ತೊಳೆದುಕೊಂಡು ಪರಿಪೂರ್ಣವಾದ ನಂಬಿಕೆಯುಳ್ಳವರಾಗಿಯೂ ಯಥಾರ್ಥ ಹೃದಯವುಳ್ಳವರಾಗಿಯೂ ದೇವರ ಬಳಿಗೆ ಬರೋಣ"** (ಇಬ್ರಿ. 10:22).

**2. ಶರೀರ ಮರಣ :–** ಒಬ್ಬ ವ್ಯಕ್ತಿ ಸತ್ತಾಗ ನಾವು ಆತನ ಹೆಸರನ್ನು ಸೂಚಿಸಿ ಇದು ಆ ವ್ಯಕ್ತಿಯ ಶರೀರವೆಂದು ಹೇಳುತ್ತೇವೆ. ಪ್ರಾಣ ಹೋದಾಗಲೇ ಅವನ ಆತ್ಮವು ಶರೀರವನ್ನು ಬಿಟ್ಟು ಹೋಗಿರುತ್ತದೆ. ಪ್ರಾಣವು ಶರೀರ ಬಿಟ್ಟ ಕೂಡಲೇ ಶರೀರದಲ್ಲಿದ್ದ ಆತ್ಮವು ಶರೀರವನ್ನು ಬಿಟ್ಟು ಹೋಗುವುದು ಇದು 60–70–80–90 ವರ್ಷಗಳಾಗಬಹುದು ಆದರೆ ಒಂದಲ್ಲಾ ಒಂದು ದಿನ ಮನುಷ್ಯನು ತನ್ನ ಶರೀರವನ್ನು ಬಿಡಲೇ ಬೇಕು. **"ನಮ್ಮ ಆಯುಷ್ಕಾಲವು ಎಪ್ಪತ್ತು ವರುಷ; ಬಲ ಹೆಚ್ಚಿದರೆ ಎಂಬತ್ತು. ಕಷ್ಟಸಂಕಟಗಳೇ ಅದರ ಆಡಂಬರ. ಅದು ಬೇಗನೆ ಗತಿಸಿ ಹೋಗುತ್ತದೆ; ನಾವು ಹಾರಿಹೋಗುತ್ತೇವೆ. ನಿನ್ನ ಕೋಪದ ಬಲವನ್ನೂ ಭಯಭಕ್ತಿಗೆ ಕಾರಣವಾಗಿರತಕ್ಕ ನಿನ್ನ ರೌದ್ರವನ್ನು ಗ್ರಹಿಸುವವರಾರು? ನಮ್ಮ ದಿನಗಳು ಕೊಂಚವೇ ಎಂದು ಎಣಿಸಿಕೊಳ್ಳುವ ಹಾಗೆ ನಮಗೆ ಕಲಿಸು; ಆಗ ಜ್ಞಾನದ ಹೃದಯವನ್ನು ಪಡಕೊಳ್ಳುವೆವು"** (ಕೀರ್ತ. 90:10–12).

**"ತನ್ನನ್ನು ಪಾತಾಳಕ್ಕೆ ತಪ್ಪಿಸಿಕೊಂಡುಮರಣಹೊಂದದೆ ಚಿರಂಜೀವಿಯಾಗಿರುವ ಮನುಷ್ಯನು ಯಾವನಿದ್ದಾನೆ?"** (ಕೀರ್ತ. 89:48). **"ಆದರೆ ಯಾವನಾದರೂ ತನ್ನ ಸಹೋದರನು ಸಮಾಧಿಯಲ್ಲಿ ಸೇರದೆ ಶಾಶ್ವತವಾಗಿ ಬದುಕಿರುವದಕ್ಕಾಗಿ ದೇವರಿಗೆ ಈಡನ್ನು ಕೊಟ್ಟು ಅವನ ಪ್ರಾಣವನ್ನು ಬಿಡಿಸಲಾರನು ಮರಣವನ್ನು ತಪ್ಪಿಸಿಕೊಳ್ಳುವುದಕ್ಕೆ ಎಷ್ಟು ಹಣಕೊಟ್ಟರೂ ಸಾಲುವುದೇ ಇಲ್ಲ; ಅಂಥ ಪ್ರಯತ್ನವನ್ನು ನಿಷ್ಫಲವೆಂದು ಬಿಟ್ಟೇ ಬಿಡಬೇಕು".** (ಕೀರ್ತ. 49:7–8). **"ಗಾಳಿಯನ್ನು ತಡೆಯುವ ಶಕ್ತಿಯು ಹೇಗೆ ಯಾರಿಗೂ ಇಲ್ಲವೋ ಹಾಗೆ ತಮ್ಮ ಮರಣದಿನವನ್ನು ತಡೆಯುವ ಶಕ್ತಿಯು ಯಾರಿಗೂ ಇಲ್ಲ"** (ಪ್ರಸ. 8:8).

**3. ನಿತ್ಯ ಮರಣ :–** ಇದು ಮನುಷ್ಯನ ನಿತ್ಯ ಸ್ಥಿತಿಯ ಬಗ್ಗೆ ತಿಳಿಸುತ್ತದೆ. ಮನುಷ್ಯನು ತನ್ನ ಪಾಪ ಕ್ಷಮಿಸಲ್ಪಡದೇ ರಕ್ಷಕನಾಗಿ ಬಂದ ಯೇಸುಕ್ರಿಸ್ತನನ್ನು ತನ್ನ ಜೀವಿತದ ರಕ್ಷಕನಾಗಿ ಅಂಗೀಕರಿಸದೆ ಹಾಗೆಯೇ ಸತ್ತರೆ ಅವನು ನಿತ್ಯ ಮರಣಕ್ಕೊಳಗಾಗುತ್ತಾನೆ. ನಿತ್ಯ ಮರಣ ಅಂದರೆ ಮನುಷ್ಯನು ಸತ್ತ (ಶರೀರ) ಬಿಟ್ಟ ನಂತರ) ತನ್ನ ಪಾಪದ ಶಿಕ್ಷೆಯನ್ನು ಅನುಭವಿಸುವುದಕ್ಕೆ ನರಕಕ್ಕೆ ಹೋಗುವ ಸ್ಥಿತಿಗೆ ನಿತ್ಯ ಮರಣ ಎನ್ನುತ್ತಾರೆ. ದೇವರ ವಾಕ್ಯ ಹೇಳುತ್ತದೆ, **"ಯೆಹೋವನು ಸಿಕ್ಕುವ ಕಾಲದಲ್ಲಿ ಆತನನ್ನು ಆಶ್ರಯಿಸಿರಿ, ಆತನು ಸಮೀಪದಲ್ಲಿರುವಾಗ ಆತನಿಗೆ ಬಿನ್ನಹಮಾಡಿರಿ. ದುಷ್ಟನು ತನ್ನ ದುರ್ಮಾರ್ಗವನ್ನು ಬಿಡಲಿ, ಕೆಡುಕನು ತನ್ನ ದುರಾಲೋಚನೆಗಳನ್ನು ತ್ಯಜಿಸಲಿ; ಯೆಹೋವ ಕಡೆಗೆ ತಿರುಗಿಕೊಂಡು ಬರಲಿ, ಆತನು ಅವನನ್ನು ಕರುಣಿಸುವನು; ನಮ್ಮ ದೇವರನ್ನು ಆಶ್ರಯಿಸಲಿ, ಆತನು ಮಹಾಕೃಪೆಯಿಂದ ಕ್ಷಮಿಸುವನು".** ಸತ್ಯವೇದದಲ್ಲಿ ಸ್ಪಷ್ಟವಾಗಿ ನಿತ್ಯ ನರಕ ಹಾಗೂ ನಿತ್ಯ ಶಿಕ್ಷೆಯ ಕುರಿತು ಬರೆಯಲ್ಪಟ್ಟಿದೆ (ಯೆಶಾ. 55:6–7). **"ಆ ಮೇಲೆ ಆತನು ಎಡಗಡೆಯಲ್ಲಿರುವವರಿಗೆ ಶಾಪಗ್ರಸ್ತರೇ, ನನ್ನನ್ನು ಬಿಟ್ಟು ಪಿಶಾಚನಿಗೂ ಅವನ ದೂತರಿಗೂ ಸಿದ್ಧಮಾಡಿರುವ ನಿತ್ಯ ಬೆಂಕಿಯೊಳಕ್ಕೆ ಹೋಗಿರಿ"** (ಮತ್ತಾ. 25:41). ಮತ್ತು ಇವರು ನಿತ್ಯಶಿಕ್ಷೆಗೂ (ನೀತಿವಂತರು ಅಂದರೆ ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ಯೇಸುವಿನ ಶಿಲುಬೆಯ ಮೇಲೆ ನಂಬಿಕೆಯಿಟ್ಟು ಯೇಸುಕ್ರಿಸ್ತನ ರಕ್ತದಲ್ಲಿ ಶುದ್ಧೀಕರಣ ಹೊಂದಿದವರು) ನಿತ್ಯಜೀವಕ್ಕೂ ಹೋಗುವರು (ಮತ್ತಾ. 25:46). **"ದೂಳಿನ ನೆಲದೊಳಗೆ ದೀರ್ಘನಿದ್ರೆಮಾಡುವವರಲ್ಲಿ ಅನೇಕರು ಎಚ್ಚತ್ತು ಕೆಲವರು**

ನನ್ನ ರಕ್ಷಣೆಯು ತಡವಾಗದು; ಚೀಯೋನಿನಲ್ಲಿ ರಕ್ಷಣಾ ಕಾರ್ಯವನ್ನು ನಡಿಸಿ ಇಸ್ರಾಯೇಲಿಗೆ ನನ್ನ ಮಹಿಮೆಯನ್ನು ದಯಪಾಲಿಸುವೆನು (ಯೆಶಾ. 46:13).

ನಿತ್ಯಜೀವವನ್ನು, ಕೆಲವರು ನಿಂದನೆ ನಿತ್ಯತಿರಸ್ಕಾರಗಳನ್ನು ಅನುಭವಿಸುವರು**” (ದಾನಿ. 12:2).

**“ಒಳ್ಳೇದನ್ನು ಮಾಡಿದವರಿಗೆ ಜೀವಕ್ಕಾಗಿ ಪುನರುತ್ಥಾನವಾಗುವದು; ಕೆಟ್ಟದ್ದನ್ನು ನಡಿಸಿದವರಿಗೆ ತೀರ್ಪಿಗಾಗಿ ಪುನರುತ್ಥಾನವಾಗುವದು”** (ಯೋಹಾ. 5:29). **“ಇದಲ್ಲದೆ ಅವರನ್ನು ಮರುಳುಗೊಳಿಸಿದ ಸೈತಾನನು ಬೆಂಕಿಗಂಧಕಗಳುರಿಯುವ ಕೆರೆಯಲ್ಲಿ ದೊಬ್ಬಲ್ಪಟ್ಟನು. ಅಲ್ಲಿ ಮೃಗವೂ ಸುಳ್ಳು ಪ್ರವಾದಿಯೂ ಕೂಡ ಇದ್ದಾರೆ; ಅವರು ಹಗಲಿರುಳು ಯುಗಯುಗಾಂತರಗಳಲ್ಲಿಯೂ ಯಾತನೆ ಪಡುತ್ತಿರುವರು”** (ಪ್ರಕ. 20:10). **“ಆ ಮೇಲೆ ಮೃತ್ಯುವೂ ಪಾತಾಳವೂ ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟವು; ಆ ಬೆಂಕಿಯ ಕೆರೆಯೇ ಎರಡನೆಯ ಮರಣವು. ಯಾವನ ಹೆಸರು ಜೀವಬಾಧ್ಯರ ಪಟ್ಟಿಯಲ್ಲಿ ಬರೆದದ್ದಾಗಿ ಕಾಣಲಿಲ್ಲವೋ ಅವನು ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟನು”** (ಪ್ರಕ. 20:14–15). (ಜೀವ ಬಾಧ್ಯರ ಪಟ್ಟಿ ಅಂದರೆ ಯಾರು ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ಕರ್ತನಾದ ಯೇಸುಕ್ರಿಸ್ತನ ಮರಣ ಹೂಣಲ್ಪಡುವಿಕೆ ಪುನರುತ್ಥಾನದಲ್ಲಿ ನಂಬಿಕೆಯಿಟ್ಟು ಕರ್ತನಾದ ಯೇಸುಕ್ರಿಸ್ತನನ್ನು ತನ್ನ ಜೀವಿತದ ಸ್ವಂತ ರಕ್ಷಕನಾಗಿ ಅಂಗೀಕರಿಸುತ್ತಾರೋ ಅವರ ಹೆಸರು ದೇವರ ಬಳಿಯಲ್ಲಿರುವ ಜೀವಬಾಧ್ಯರ ಪುಸ್ತಕದಲ್ಲಿ ಬರೆಯಲ್ಪಡುತ್ತದೆ).

**“ದೇವರ ಕೋಪವೆಂಬ ಪಾತ್ರೆಯಲ್ಲಿ ಏನೂ ಬೆರಸದೆ ಹಾಕಿದ ದೇವರ ರೌದ್ರವೆಂಬ ದ್ರಾಕ್ಷಾರಸವನ್ನು ಕುಡಿಯುವವನು; ಪರಿಶುದ್ಧ ದೇವದೂತರ ಮುಂದೆಯೂ ಯಜ್ಞದ ಕುರಿಯಾದಾತನ ಮುಂದೆಯೂ ಬೆಂಕಿಯಿಂದಲೂ ಗಂಧಕದಿಂದಲೂ ಯಾತನೆಪಡುವನು. ಅಂಥವರ ಯಾತನೆಯ ಹೊಗೆಯು ಯುಗಾಯುಗಾಂತರಗಳಲ್ಲಿಯೂ ಏರುತ್ತಾ ಹೋಗುತ್ತದೆ; ಮೃಗಕ್ಕೆ ಮತ್ತು ಅದರ ವಿಗ್ರಹಕ್ಕೆ ನಮಸ್ಕಾರ ಮಾಡುವವರೂ ಅದರ ಹೆಸರನ್ನು ಸೂಚಿಸುವ ಗುರುತನ್ನು ಹಾಕಿಕೊಂಡಿರುವವರೆಲ್ಲರೂ ಹಗಲಿರುಳು ಉಪಶಮನವಿಲ್ಲದೆ ಯಾತನೆಪಡುವನರು ಎಂದು ಮಹಾಶಬ್ದದಿಂದ ಹೇಳಿದನು”** (ಪ್ರಕ. 14:10–11).

ಪ್ರಿಯರೇ, ನಿತ್ಯ ನರಕವು ಸತ್ಯ, ನಿತ್ಯಯಾತನೆಯು ಸತ್ಯ, ನಿತ್ಯ ಶಿಕ್ಷೆಯು ಸತ್ಯ ಆದರೆ ಇದರಿಂದ ಬಿಡುಗಡೆ ಹೊಂದಲು ಬಯಸುವ ಪ್ರತಿಯೊಬ್ಬರಿಗೆ ಈ ಲೋಕದಲ್ಲಿ ಜೀವವಿರುವಾಗ ಮಾತ್ರ ಅವಕಾಶ. ಒಂದು ಸಲ ಸತ್ತ ಮೇಲೆ ನರಕದ ಶಿಕ್ಷೆಯಿಂದ ಬಿಡುಗಡೆ ಹೊಂದಲು ಸಾಧ್ಯವಿಲ್ಲ. ನೀನು ಯಾರೇ ಆಗಿರು ಯೇಸುಕ್ರಿಸ್ತನು ತನ್ನ ಎರಡು ಕೈಗಳನ್ನು ಚಾಚಿ ಪಾಪದಿಂದಲೂ, ಆತ್ಮೀಕ ಮರಣದಿಂದಲೂ, ನಿತ್ಯ ಮರಣದಿಂದಲೂ ನಿನ್ನನ್ನು ಬಿಡುಗಡೆ ಮಾಡುವುದಕ್ಕಾಗಿ ಕಾಯುತ್ತಿದ್ದಾನೆ. ನೀನು ಆತನ ಮೊರೆ ಹೋಗುವುದಾದರೆ ನಿಶ್ಚಯವಾಗಿ ಬಿಡುಗಡೆ ಕಾಣುವಿ.

ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

---

# ಬಲ ಹೊಂದಿಕೊ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**ವಯಸ್ಕರ ಸ್ವರ**

**2) ಕರ್ತನನ್ನು ಆಶ್ರಯಿಸಿ ಬಲ ಹೊಂದುವುದು (ಎಫೆ. 6:10):** **“ನೀವು ಕರ್ತನನ್ನೂ ಆತನ ಅತ್ಯಧಿಕವಾದ ಶಕ್ತಿಯನ್ನೂ ಆಶ್ರಯಿಸಿಕೊಂಡವರಾಗಿ ಬಲಗೊಳ್ಳಿರಿ”.** ಅರಸನಾದ ಯೆಹೋಷಾಫಾಟನಿಗೆ ವಿರೋಧವಾಗಿ ಶತ್ರುಗಳು ಸುತ್ತುವರಿದು ಯುದ್ಧಕ್ಕೆ ಬಂದ ಸಮಯದಲ್ಲಿ ಆತನು ಹೆದರಿ ಯೆಹೋವನನ್ನೇ ಆಶ್ರಯಿಸಿಕೊಳ್ಳಬೇಕೆಂದು ನಿರ್ಣಯಿಸಿ ಯೆಹೂದ್ಯರೆಲ್ಲರೂ ಉಪವಾಸ ಮಾಡಬೇಕೆಂದು ಪ್ರಕಟಿಸಿ ವಿರೋಧವಾಗಿ ಬಂದ ಶತ್ರುಗಳನ್ನು ಜಯಿಸಲು ನಮ್ಮಿಂದ ಸಾಧ್ಯವಿಲ್ಲ ಎಂದು ದೇವರನ್ನೇ ಆಶ್ರಯಿಸಿಕೊಂಡಾಗ ಅವರ ವಿರುದ್ಧವಾಗಿ ಬಂದಿರುವ ವೈರಿಗಳನ್ನು ತಮ್ಮ ತಮ್ಮೊಳಗೆ ಹೊಡೆದಾಡಿ ಸತ್ತು ಹೋದರೆಂದು ನಾವು ಓದುತ್ತೇವೆ (2 ಪೂರ್ವ. 20:1). **“ಆತನನ್ನು ಆಶ್ರಯಿಸಿಕೊಂಡವರು ಎಷ್ಟೋ ಧನ್ಯರು”** (ಕೀರ್ತ. 34:8).

**“ಅವರು ಆತನ ಆಶ್ರಿತರಾದ್ದರಿಂದ ದುಷ್ಟರ ಕೈಯಿಂದ ತಪ್ಪಿಸಿ ರಕ್ಷಿಸುವನು”** (ಕೀರ್ತ. 37:40). ದಾವೀದನು ಸೌಲನ ಭಯದಿಂದ ತಪ್ಪಿಸಿ ಓಡಿ ಹೋಗಿ ಗುಹೆಯಲ್ಲಿ ಅಡಗಿ ದೇವರನ್ನು ಆಶ್ರಯ ಸ್ಥಾನವೆಂದು ಕರೆಯುವ ಕೀರ್ತನೆಯನ್ನು ನಾವು ಓದಬಹುದು. **“ನೀನೇ ನನ್ನ ಆಶ್ರಯಸ್ಥಾನವಲ್ಲವೇ! ಆಪತ್ತುಗಳು ಕಳೆದುಹೋಗುವ ತನಕ ನಿನ್ನ ರೆಕ್ಕೆಗಳ ಮರೆಯನ್ನು ಆಶ್ರಯಿಸಿಕೊಳ್ಳುವೆನು”** (ಕೀರ್ತ. 57:1). ದೇವ ಮಗುವೆ ನಿನಗೊದಗುವ ಆಪತ್ತು, ಕಷ್ಟ ಸಂಕಟಗಳಲ್ಲಿ ಕರ್ತನನ್ನು ಆಶ್ರಯಿಸುವುದಾದರೆ ನಿಜವಾಗಿಯೂ ನೀನು ಬಲಗೊಳ್ಳುವಿ. **“ಸದ್ಭಕ್ತರು ಯೆಹೋವನಲ್ಲಿ ಆನಂದಪಟ್ಟು ಆತನನ್ನೇ ಆಶ್ರಯಿಸಿಕೊಳ್ಳುವರು”** (ಕೀರ್ತ. 64:10).

ಯೆಹೋವನು ತನ್ನ ಪ್ರಜೆಯನ್ನು ಸಂತೈಸಿ ದಿಕ್ಕಿಲ್ಲದ ತನ್ನ ಜನರನ್ನು ಕರುಣಿಸುತ್ತಿದ್ದಾನೆ
(ಯೆಶಾ. 49:13).

3) **ಪವಿತ್ರಾತ್ಮನಿಂದ ಬಲಗೊಳ್ಳುವುದು (ಎಫೆ. 3:16) : "ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗುವಿರಿ"** (ಅ.ಕೃ. 1:8). ಸಂಸೋನನು ದೇವರಾತ್ಮನ ಬಲದಿಂದ ಅತಿಶಯವಾದ ಕಾರ್ಯಗಳನ್ನು ನಡಿಸುತ್ತಾನೆ. ಎದುರಾಗಿ ಬಂದಿರುವ ಸಿಂಹವನ್ನು ಕೈಯಲ್ಲಿ ಏನಿಲ್ಲದಿದ್ದರೂ ದೇವರ ಬಲದಿಂದ ಹೋತದ ಮರಿ ಎಂಬಂತೆ ಸೀಳಿ ಹಾಕಿದನು (ನ್ಯಾಯ. 14:6). ದೇವರ ಬಲದಿಂದ ತುಂಬಿ ಕೈಗೆ ಸಿಕ್ಕಿದ ಕತ್ತೆಯ ದವಡೆಯಿಂದ ಸಾವಿರ ಜನ ವೈರಿಯನ್ನು ಹತಿಸಿದನು (ನ್ಯಾಯ. 15:14). ಯೇಸು ತನ್ನ ಶಿಷ್ಯರಿಗೆ ಮೇಲಣ ಲೋಕದ ಶಕ್ತಿಗಾಗಿ ಕಾದುಕೊಂಡು ಬಲಗೊಳ್ಳಿರಿ ಎಂದು ಕರೆ ನೀಡಿದರು (ಲೂಕ. 24:49). ಪಂಚಶತ್ತಮ ದಿನದಿಂದ ಪವಿತ್ರಾತ್ಮನ ಬಲವನ್ನು ಹೊಂದಿದ ಬಳಿಕವೇ ಶಿಷ್ಯರೆಲ್ಲರೂ ಬಲಗೊಂಡು ಕರ್ತನ ಸೇವೆ ಮಾಡುವವರಾದರು. ಸೋತು ಹೋಗುವ ಸಮಯದಲ್ಲಿ ಪವಿತ್ರಾತ್ಮನೇ ಬಲಪಡಿಸುವವನಾಗಿದ್ದಾನೆ.

1) **ಬಲಹೀನತೆಯಲ್ಲಿ ಬಲಹೊಂದುವುದು : (2 ಕೊರಿ. 12:9).** ಸಾಮಾನ್ಯವಾಗಿ ನಮ್ಮ ಬಲದಿಂದ ನಾವು ಶೋಧನೆಗಳನ್ನು ಜಯಿಸಲು ಶತಪ್ರಯತ್ನ ನಡಿಸುತ್ತೇವೆ. ಆದರೆ ದೇವರು ಅದನ್ನು ಅನುಮತಿಸುವುದಿಲ್ಲ. ಬಲ್ಲದಿಂದಲ್ಲ, ಪರಾಕ್ರಮದಿಂದಲ್ಲ ದೇವರಾತ್ಮನಿಂದಲೇ ಭಕ್ತನಾದ ಪೌಲನು ತಾನು ಹೆಚ್ಚಿಸಿಕೊಳ್ಳಬಾರದೆಂದು ದೇವರು ಶೂಲವನ್ನು ಶರೀರದಲ್ಲಿ ನೆಟ್ಟಂತ ವಿಷಯದಲ್ಲಿ ತನ್ನ ಪತ್ರಿಕೆಯಲ್ಲಿ ಬರೆಯುತ್ತಾನೆ, ಆತನು 3 ಸಾರಿ ಈ ಹೋರಾಟದ ವಿಷಯದಲ್ಲಿ ಕರ್ತನಲ್ಲಿ ಬೇಡಿಕೊಂಡರೂ ದೇವರು ಬಿಡುಗಡೆಕೊಡದೆ ತನ್ನ ಕೃಪೆಯನ್ನು ಸುರಿಸುತ್ತಾನೆ. ದೇವರು ಹೇಳುತ್ತಾನೆ, **"ನನ್ನ ಕೃಪೆಯೇ ನಿನಗೆ ಸಾಕು ಬಲಹೀನತೆಯಲ್ಲಿ ಬಲವು ಪೂರ್ಣಸಾಧಕವಾಗುತ್ತದೆ"** (2 ಕೊರಿ. 12:9). ನಿಜವಾಗಿಯೂ ನಮ್ಮ ಬಲಹೀನತೆಯಲ್ಲಿ ದೇವರ ಬಲ ಪ್ರಕಟವಾಗುವುದು. ನಮ್ಮ ನಿರ್ಬಲವಸ್ಥೆಯಲ್ಲಿ ದೇವರ ಬಲ ಪ್ರಕಟವಾಗುವುದು ಏಕೆಂದರೆ ದೇವರು ಸೋತವನಿಗೆ ತ್ರಾಣವನ್ನು ನಿರ್ಬಲನಿಗೆ ಬಹು ಬಲವನ್ನು ದಯ ಪಾಲಿಸುತ್ತಾನೆ (ಯೆಶಾ. 40:29).

**5 ಕರ್ತನನ್ನು ನಿರೀಕ್ಷಿಸುವವರಿಗೆ ಬಲ :** (ಯೆಶಾ. 40:31). ಸತ್ಯವೇದ ಹೇಳುತ್ತದೆ, **"ಯೆಹೋವನನ್ನು ನಿರೀಕ್ಷಿಸುವವರೋ ಹೊಸ ಬಲವನ್ನು ಹೊಂದುವರು; ಹದ್ದುಗಳಂತೆ ರೆಕ್ಕೆಗಳನ್ನು ಚಾಚಿಕೊಂಡು ಏರುವರು; ಓಡಿ ದಣಿಯರು, ನಡೆದು ಬಳಲರು".** ದೇವರನ್ನು ನಿರೀಕ್ಷಿಸುವವರನ್ನು ಹದ್ದಿಗೆ ಹೋಲಿಸಲಾಗಿದೆ.

1) ಹದ್ದು ಮೇಲ್ಮಟ್ಟದಲ್ಲಿ ಹಾರುವ ಪ್ರಕಾರವೇ ದೇವರು ತನ್ನ ಮಕ್ಕಳನ್ನು ಉನ್ನತ ಮಟ್ಟದಲ್ಲಿ ನಡಿಸುವವನಾಗಿದ್ದಾನೆ (ಧರ್ಮೋ. 28:1).

2) ಹದ್ದಿಗೆ ದೇವರು ಆಹಾರವನ್ನು ದೂರದಿಂದಲೇ ಗೋಚರಪಡಿಸುತ್ತಾನೆ. ಅದಕ್ಕೆ ದೂರ ದೃಷ್ಟಿಯಿರುವುದರಿಂದ ಅದೇ ಪ್ರಕಾರ ಕರ್ತನನ್ನು ನಿರೀಕ್ಷಿಸುವವರಿಗೆ, ಪ್ರಿಯರಿಗೆ ಆಹಾರವನ್ನು ಕೊಡಲು ಶಕ್ತನು (ಕೀರ್ತ. 127:2).

3) ಹದ್ದು ಮದಿಯಾದಾಗ ತಿರುಗಿ ಬಂಡೆ ಸಂದಿನಲ್ಲಿದ್ದು ಮರಳಿ ಯೌವನ ಹೊಂದಿ ಕೊಂಡ ಪ್ರಕಾರವೇ ದೇವ ಮಕ್ಕಳು ಕ್ರಿಸ್ತನಿಂದಲೇ ಹೊಸ ಜೀವ, ಹೊಸ ಬಲ ಹೊಂದುವರು (ಕೀರ್ತ. 103:5).

4) ಹದ್ದುಗಳಿಗೆ ಶತ್ರುಕಾಟ ಮತ್ತು ಭಯವಿಲ್ಲದೆ ಇರುವ ಪ್ರಕಾರವೇ ದೇವ ಮಕ್ಕಳು ನಿರ್ಭಯದಿಂದ ಇರುವರು (ಧರ್ಮೋ. 28:7).

5) ಹದ್ದು ತನ್ನ ಮರಿಗಳನ್ನು ರೆಕ್ಕೆಗಳ ಮೇಲೆ ಹೊತ್ತುಕೊಂಡು ಹಾರುವಂತೆ ಕರ್ತನು ತನ್ನ ಮಕ್ಕಳನ್ನು ನರೆಬಂದಾಗಲೂ ಹೊತ್ತುಕೊಳ್ಳುವನು (ಯೆಶಾ. 46:4).

6) ಹದ್ದು ತನ್ನ ಮರಿಗಳನ್ನು ಹಾರಲು ಕಲಿಸುವಂತೆ ದೇವರು ತನ್ನ ಮಕ್ಕಳನ್ನು ಜೀವಿಸಲು ಕಲಿಸುತ್ತಾನೆ (ಧರ್ಮೋ. 32:11).

ಇದಲ್ಲದೆ ದೇವ ಮಗುವೆ ಆತನ ವಾಕ್ಯದ ಮೂಲಕವೂ (ಕೀರ್ತ. 119:50) ಪ್ರಾರ್ಥನೆ ಮೂಲಕವೂ (ಕೀರ್ತ. 138:3) ಅದ್ಭುತ ಸೂಚಕ ಕಾರ್ಯಗಳ ಮೂಲಕ ಬಲ ಹೊಂದಿಕೊ (ಮಾರ್ಕ. 16:20).

ಮುಂದುವರಿಯುವದು.....

**ಪಾ॥ ರೊನಾಲ್ಡ್ ಮಚಾದೋ**

*ಬೇತೇಲ್ ಚರ್ಚ್ ಕಾಮಗೆರೆ.*

ನನ್ನ ನ್ಯಾಯವು ಯೆಹೋವನಲ್ಲಿದೆ, ನನಗೆ ಲಾಭವು ನನ್ನ ದೇವರಿಂದಲೇ ಆಗುವದು ಅಂದುಕೊಂಡೆನು (ಯೆಶಾ. 49:5).

# ಪ್ರಶ್ನೋತ್ತರಗಳ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

4) ಪರಿಶುದ್ಧಾತ್ಮನು ಕ್ರೈಸ್ತ ವಿಶ್ವಾಸಿಗಳ ಸಹಾಯಕನು. ಹಳೆ ಒಡಂಬಡಿಕೆಯಲ್ಲಿ 4 ವಿಧವಾದ ಅಭಿಷೇಕದ ಸೇವೆಗಳಿದ್ದವು.

1. ರಾಜ
2. ಯಾಜಕ
3. ಪ್ರವಾದಿ
4. ನ್ಯಾಯಸ್ಥಾಪಕ.

ದೇವರಿಗೆ ಇವರ ಮೂಲಕ ಏನಾದರೂ ಕಾರ್ಯ ಮಾಡಲಿಕ್ಕೆ ಇದ್ದರೆ ಪರಿಶುದ್ಧಾತ್ಮನು ಬರುತ್ತಿದ್ದನು. ಕೆಲಸ ಆದ ಮೇಲೆ ಪರಿಶುದ್ಧಾತ್ಮನು ಹೊರಟು ಹೋಗುತ್ತಿದ್ದನು. ಒಂದೇ ಮಾತಿನಲ್ಲಿ ಹೇಳಬೇಕಾದರೆ ಪರಿಶುದ್ಧಾತ್ಮನು ಎಲ್ಲಾ ಮನುಷ್ಯರಲ್ಲಿ ಇರಲಿಲ್ಲ. ಸೇವೆಮಾಡುವ ವ್ಯಕ್ತಿಯಲ್ಲೂ ಶಾಶ್ವತವಾಗಿ ಇರುತ್ತಾ ಇರಲಿಲ್ಲ. ಆದರೆ ಹೊಸ ಒಡಂಬಡಿಕೆಯಲ್ಲಿ ಕರ್ತನಾದ ಯೇಸುಕ್ರಿಸ್ತನು **"ಆಗ ತಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು"** (ಯೋಹಾ. 14:16). ಹೊಸ ಒಡಂಬಡಿಕೆಯಲ್ಲಿ ಪರಿಶುದ್ಧಾತ್ಮನು ಕರ್ತನಾದ ಯೇಸುಕ್ರಿಸ್ತನನ್ನು ಅಂಗೀಕರಿಸಿ ತಂದೆ ಮಗ ಪರಿಶುದ್ಧಾತ್ಮನ ಹೆಸರಿನಲ್ಲಿ ನೀರಿನಲ್ಲಿ ದೀಕ್ಷಾಸ್ನಾನ ತೆಗೆದುಕೊಂಡಿರುವ ಪ್ರತಿಯೊಬ್ಬ ವಿಶ್ವಾಸಿಯ ಒಳಗಡೆ ಇದ್ದಾನೆ ಹಾಗೂ ಹಳೆ ಒಡಂಬಡಿಕೆಯಲ್ಲಿ ನಡೆದ ಹಾಗೆ ಹೋಗುತ್ತಾ ಬರುತ್ತಾ ಇಲ್ಲಾ ಒಬ್ಬ ವ್ಯಕ್ತಿಯ ಒಳಗಡೆ ಬಂದರೆ ಶಾಶ್ವತವಾಗಿ ಆತನಲ್ಲಿ ವಾಸ ಮಾಡುತ್ತಾನೆ.

**1) ಸತ್ಯವೇದದಲ್ಲಿರುವ ಪರಿಶುದ್ಧಾತ್ಮನ ಕೆಲವು ಹೆಸರುಗಳು :**

1) ಬಲ ಪ್ರೀತಿ ಶಿಕ್ಷಣಗಳ ಆತ್ಮನು (2 ತಿಮೊ. 1:7).
2) ತೇಜೋಮಯವಾದ ಆತ್ಮನು (1 ಪೇತ್ರ. 4:14).
3) ಕೃಪಾವರವಾಗಿರುವ ಆತ್ಮ (ಇಬ್ರಿ. 10:29).
4) ಜ್ಞಾನದ ಆತ್ಮ (ಯೆಶಾ. 11:2).
5) ವಿವೇಕದ ಆತ್ಮ (ಯೆಶಾ. 11:2).
6) ಆಲೋಚನೆಯ ಆತ್ಮ (ಯೆಶಾ. 11:26).
7) ಪರಾಕ್ರಮದ ಆತ್ಮ (ಯೆಶಾ. 11:2).
8) ತಿಳುವಳಿಕೆಯ ಆತ್ಮ (ಯೆಶಾ. 11:2).
9) ಯೆಹೋವನ ಭಯವನ್ನುಂಟು ಮಾಡುವ ಆತ್ಮ (ಯೆಶಾ. 11:2).
10) ಯೆಹೋವನ ಆತ್ಮ (ಯೆಶಾ. 11:2).
11) ನ್ಯಾಯತೀರ್ಪಿನ ಆತ್ಮ (ಯೆಶಾ. 4:4).
12) ದಹಿಸುವ ಆತ್ಮ (ಯೆಶಾ. 4:4).
13) ಪವಿತ್ರಾತ್ಮ (ಯೆಶಾ. 63:10).
14) ಉಪದೇಶಿಸುವ ಒಳ್ಳೆ ಆತ್ಮ (ಯೆರೆ. 9:20).
15) ದೇವರಾತ್ಮ (ಆದಿ. 1:2).
16) ಪರಿಶುದ್ಧ ದೇವರ ಆತ್ಮ (ದಾನಿ. 5:11–14).
17) ಕರ್ತನ ಆತ್ಮ (ಲೂಕ. 4:18).
18) ಸತ್ಯದ ಆತ್ಮ (ಯೋಹಾ. 14:17).
19) ಜ್ಞಾನವುಳ್ಳ ಆತ್ಮ (ಎಫೆ. 1:17).
20) ಜೀವವುಳ್ಳ ದೇವರ ಆತ್ಮ (2 ಕೊರಿ. 3:3).

**2) ಹಳೆ ಒಡಂಬಡಿಕೆಯ ಅಭಿಷೇಕಗಳು :** ನಾನು ಆಗಲೇ ಮೇಲಿನ ವಚನಗಳಲ್ಲಿ ತಿಳಿಸಿದ್ದೇನೆ. ಹಳೆ ಒಡಂಬಡಿಕೆಯಲ್ಲಿ 4 ವಿಧವಾದ ಅಭಿಷೇಕಗಳಿತ್ತು ಎಂದು. ಎ) ರಾಜರ ಅಭಿಷೇಕ. ಬಿ) ಯಾಜಕರ ಅಭಿಷೇಕ ಸಿ) ಪ್ರವಾದಿಯ ಅಭಿಷೇಕ ಡಿ) ನ್ಯಾಯಸ್ಥಾಪಕರ ಅಭಿಷೇಕ. ಈ ಅಭಿಷೇಕ ಇದ್ದವರಿಗೆ ಮಾತ್ರ ಮೇಲಿನ ಸೇವೆಗಳನ್ನು ಮಾಡಲು ಸಾಧ್ಯವಾಗುತ್ತಾ ಇತ್ತು. ಅಭಿಷೇಕವಿಲ್ಲದೆ ಯಾರೂ ಕೂಡ ಈ ಸೇವೆಗಳನ್ನು ಮಾಡಲಾಗುತ್ತಿರಲಿಲ್ಲ.

3) ಅಭಿಷೇಕ ಎಂದರೇನು? ನಾನು 1 ಸಮು. 16:13–14 ವಚನಗಳನ್ನು ನೆನಪಿಸಲು ಇಷ್ಟಪಡುತ್ತೇನೆ. **"ನಾನು ಆರಿಸಿಕೊಂಡವನು ಇವನೇ ಎಂದು ಆಜ್ಞಾಪಿಸಲು ಸಮುವೇಲನು ಎಣ್ಣೆಯ ಕೊಂಬನ್ನು ತೆಗೆದುಕೊಂಡು ಅವನನ್ನು ಅವನ ಸಹೋದರರ ಮಧ್ಯದಲ್ಲೇ ಅಭಿಷೇಕಿಸಿದನು. ಕೂಡಲೆ ಯೆಹೋವನ ಆತ್ಮವು ದಾವೀದನ ಮೇಲೆ ಬಂದು ನೆಲೆಗೊಂಡಿತು. ಅನಂತರ ಸಮುವೇಲನು ರಾಮಕ್ಕೆ ಹೊರಟು ಹೋದನು".** ಯೆಹೋವನ ಆತ್ಮವು ಸೌಲನನ್ನು ಬಿಟ್ಟು ಹೋಯಿತು. ಯೆಹೋವನು ಕಳುಹಿಸಿದ ದುರಾತ್ಮವು ಬಂದು ಅವನನ್ನು ಪೀಡಿಸುತ್ತಿತ್ತು.

ಅಭಿಷೇಕ ಅಂದರೆ ದೇವರ ರಾಜ್ಯದ ಕಟ್ಟೋಣದ ಕೆಲಸದಲ್ಲಿ ಒಬ್ಬ ವ್ಯಕ್ತಿಗೆ ಯಾವ ಸೇವೆಗಾಗಿ ದೇವರಿಂದ ಕರೆ ಇದೆಯೋ

ನಾನು ಯೆಹೋವನ ದೃಷ್ಟಿಯಲ್ಲಿ ಮಾನ್ಯನು, ನನ್ನ ದೇವರೇ ನನಗೆ ಬಲವು (ಯೆಶಾ. 49:5).

ಆ ಸೇವೆಯನ್ನು ಮಾಡಲು ಸಿಗುವ ಜ್ಞಾನ, ಅಧಿಕಾರ, ಬಲ, ಶಕ್ತಿಯಾಗಿದೆ ಅಭಿಷೇಕ. ಹಳೆ ಒಡಂಬಡಿಕೆಯಲ್ಲಿ ಅರಸನಾದ ಸೌಲನು ಅಭಿಷೇಕ ಬರುವವರೆಗೆ ಸಾಧಾರಣ ವ್ಯಕ್ತಿಯಾಗಿದ್ದನು. ಅಭಿಷೇಕದ ನಂತರ ಪೂರ್ಣ ಮಾರ್ಪಟ್ಟು ರಾಜನ ಸೇವೆ ಮಾಡುವಂಥ ಅಧಿಕಾರ ಸಿಕ್ಕಿತು. **"ಆ ಆಳು ಮುಂದೆ ಹೋದಾಗ ಸಮುವೇಲನು ಎಣ್ಣೇ ಕುಪ್ಪಿಯಿಂದ ಅವನ ತಲೆಯ ಮೇಲೆ ತೈಲವನ್ನು ಹೊಯ್ದು ಅವನನ್ನು ಮುದ್ದಿಟ್ಟು ಅವನಿಗೆ ಯೆಹೋವನು ಅವನ ಸ್ವಾಸ್ಥ್ಯದ ಮೇಲೆ ಪ್ರಭುವಾಗಿರುವದಕ್ಕೋಸ್ಕರ ನಿಜವಾಗಿ ನಿನ್ನನ್ನು ಅಭಿಷೇಕಿಸಿದ್ದಾನೆ"** (1 ಸಮು. 10:1).

ಮುಂದುವರೆಯುವದು.......

**ಪಾ॥ ಸುನಿಲ್ ಜಾನ್ ಡಿ'ಸೋಜಾ.**

**ಆರೋಗ್ಯ ಸ್ವರ**

# ಚಳಿಗಾಲದಲ್ಲಿ ಚರ್ಮದ ರಕ್ಷಣೆ

ಮಾನಸಿಕ ಒತ್ತಡದ ಕಾರಣದಿಂದಾಗಿ ಮನುಷ್ಯನಿಗೆ ಅನೇಕ ಆರೋಗ್ಯ ಸಮಸ್ಯೆಗಳು ಉಂಟಾಗುತ್ತವೆ ಎಂಬ ವಿಚಾರವು ಇದೀಗ ಅಧ್ಯಯನಗಳಿಂದ ದೃಢಪಟ್ಟಿದೆ. ಆರೋಗ್ಯಕ್ಕೆ ಸಮಸ್ಯೆಯನ್ನು ಉಂಟುಮಾಡುವ ಈ ಮಾನಸಿಕ ಒತ್ತಡದಿಂದ ಹೊರಬರಲು, ಪೋಷಕಾಂಶಗಳಿಂದ ಕೂಡಿದ ಸಂತುಲಿತ ಆಹಾರ ಹಾಗೂ ಆಳ ಉಸಿರಾಟದ ವ್ಯಾಯಾಮಗಳು ಬಹಳ ಉತ್ತಮ ಹಾಗೂ ಸರಳ ಉಪಾಯಗಳೆನಿಸಿವೆ.

ಇವು ಅಗ್ಗ, ಸುಲಭ ಸಾಧ್ಯ ಹಾಗೂ ಯಾವುದೇ ಅಡ್ಡ ಪರಿಣಾಮಗಳಿಲ್ಲದ ವಿಧಾನಗಳು. ಮಾನಸಿಕ ಒತ್ತಡವನ್ನು ನಿಭಾಯಿಸುವಲ್ಲಿ ಆಹಾರದಲ್ಲಿರುವ ವಿಟಮಿನ್ ಹಾಗೂ ಖನಿಜಾಂಶಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ.

**ಆಹಾರ ಹಾಗೂ ಮಾನಸಿಕ ಒತ್ತಡ ನಿವಾರಣೆ :** ಮಾನಸಿಕ ಒತ್ತಡದ ಜೊತೆಗೆ ಆಗುವ ದೈಹಿಕ ಬದಲಾವಣೆಗಳು ಅಂದರೆ,

- ಅಡ್ರೀನಲಿನ್ ಹಾಗೂ ಕಾರ್ಟಿಸೋಲ್ ಒತ್ತಡದ ಹಾರ್ಮೋನ್‌ಗಳ ಹೆಚ್ಚಳ.
- ರಕ್ತದಲ್ಲಿ ಸಕ್ಕರೆ ಹಾಗೂ ಕೊಲೆಸ್ಟ್ರಾಲ್ ಪ್ರಮಾಣ ಹೆಚ್ಚಳ.
- ಹೃದಯ ಬಡಿತ ಹಾಗೂ ರಕ್ತದ ಒತ್ತಡದ ದರ ಹೆಚ್ಚಳ.
- ಉಸಿರಾಟದ ವೇಗದಲ್ಲಿ ಹೆಚ್ಚಳ.
- ದೇಹದಲ್ಲಿ ಕಾರ್ಬನ್‌ನಂತಹ ವಿಷ ಸಂಗ್ರಹಣೆ.
- ಮೆದುಳಿನಲ್ಲಿ ರಾಸಾಯನಿಕ ವ್ಯತ್ಯಾಸಗಳಿಂದಾಗಿ, ಭಾವನಾತ್ಮಕ ಬದಲಾವಣೆಗಳಾಗುವುದು.
- ಜಠರ, ಕರುಳಿನ ಅಸಹಜತೆಗಳು ವಿಸರ್ಜನಾಂಗಗಳ ಕಾಯಿಲೆಯ ರೂಪದಲ್ಲಿ ಕಾಣಿಸಿಕೊಳ್ಳಬಹುದು.
- ದೇಹದ ರೋಗ ಪ್ರತಿರೋಧಕ ಶಕ್ತಿ ಕುಂಠಿತ ವಾಗುವುದು.

ಈ ಎಲ್ಲಾ ಬದಲಾವಣೆಗಳನ್ನು ಮತ್ತೆ ಮೊದಲಿನ ರೂಪಕ್ಕೆ ತರುವುದು ಒತ್ತಡ ನಿರ್ವಹಣಾ ಕಾರ್ಯಕ್ರಮದ ಪ್ರಮುಖ ಉದ್ದೇಶ.

ಈಗಾಗಲೇ ಹೆಚ್ಚಿರುವ ಹಾರ್ಮೋನ್ ಪ್ರಮಾಣವನ್ನು ಮತ್ತೆ ಮೊದಲಿನ ಸ್ಥಿತಿಗೆ ತರುವುದು ಸ್ವಲ್ಪ ಕಷ್ಟದಾಯಕ. ಆದರೆ, ಹಾರ್ಮೋನ್‌ಗಳ ಪ್ರಚೋದಕಗಳನ್ನು, ಅಂದರೆ ಹಾರ್ಮೋನ್ ಪ್ರವಾಹದ ಹೆಚ್ಚಳಕ್ಕೆ ಕಾರಣವಾಗಿರುವ ಅಂಶಗಳನ್ನು ನಿಯಂತ್ರಿಸಬಹುದು. ಆಹಾರದಲ್ಲಿ ಬದಲಾವಣೆ ಮಾಡಿಕೊಳ್ಳುವ ಸರಳ ಉಪಾಯಗಳ ಮೂಲಕ, ಆಗಿರುವ ಇನ್ನಿತರ ಎಲ್ಲಾ ವ್ಯತ್ಯಾಸಗಳನ್ನು ಮತ್ತೆ ಸರಿಪಡಿಸಬಹುದು.

**ಆಹಾರ–ಪದಾರ್ಥಗಳ ಪಾತ್ರ**

ಒತ್ತಡ ನಿರ್ವಹಣಾ ಕಾರ್ಯದಲ್ಲಿ ಆಹಾರ ಪದಾರ್ಥಗಳ ಪಾತ್ರವೇನು ಎಂಬ ಬಗ್ಗೆ ಕೆಳಗೆ ಚರ್ಚಿಸಲಾಗಿದೆ.

- ಮಾನಸಿಕ ಒತ್ತಡವನ್ನು ತಗ್ಗಿಸುವ ಆಹಾರ ಪದಾರ್ಥಗಳು ಆಹಾರ ಕ್ರಮದಲ್ಲಿ ಸೇರಿಸುವುದು ಅಗತ್ಯ.
- ಮಾನಸಿಕ ಒತ್ತಡವನ್ನು ಹೆಚ್ಚಿಸುವ ಆಹಾರ ಪದಾರ್ಥಗಳನ್ನು ತ್ಯಜಿಸುವುದು ಅಗತ್ಯ

**ತ್ಯಜಿಸಬೇಕಾದ ಆಹಾರ ಪದಾರ್ಥಗಳು :**

- ಚಹಾ, ಕಾಫಿ, ಕೋಲಾ.
- ದಿಢೀರ್ ಆಹಾರ ಪದಾರ್ಥಗಳು ಹಾಗೂ ಕಳಪೆ (ಜಂಕ್ ಫುಡ್) ಆಹಾರಗಳು.
- ಬೆಣ್ಣೆ, ತುಪ್ಪ, ಮಾಂಸಾಹಾರ.
- ಗೋಡಂಬಿ, ಬಾದಾಮಿ ಹಾಗೂ ಇನ್ನಿತರ ಬೀಜಗಳು.
- ಲಘುಪಾನೀಯಗಳು: ಸೋಡಾ, ಚಾಕೋಲೇಟ್ ಪೇಯ ಹಾಗೂ ಲಘುಪಾನೀಯ.
- ಸಕ್ಕರೆ ಹಾಗೂ ಅಧಿಕ ಸಿಹಿ ಪದಾರ್ಥಗಳು.
- ಚಾಕೋಲೇಟ್ ಪಾನೀಯುಗಳಲ್ಲಿ ಕೆಫೀನ್ ಹಾಗೂ ಲಿಯೋಬ್ರೋಮಿನ್ ನಂತಹ ನ್ಯೂರೋಸ್ಟಿಮ್ಯುಲೇಟರ್ಸ್ ಅಥವಾ ನರ ಉತ್ತೇಜಕಗಳಿದ್ದು, ಇವನ್ನು ಸೇವಿಸಿದಾಗ ವ್ಯಕ್ತಿ ಒಂದು ಸಲಕ್ಕೆ ಉತ್ಸಾಹವನ್ನು ಪಡೆಯುತ್ತಾನೆ, ಆದರೆ ಮಾನಸಿಕ ಒತ್ತಡದ ಸಂದರ್ಭದಲ್ಲಿ ಈ ಪದಾರ್ಥಗಳನ್ನು ಸೇವಿಸದಿದ್ದರೆ ಒಳ್ಳೆಯದು. ಮಾನಸಿಕ ಒತ್ತಡದಿಂದಾಗಿ ಈಗಾಗಲೇ ಆತಂಕದಲ್ಲಿರುವ ವ್ಯಕ್ತಿಯು, ಉತ್ತೇಜಕಗಳ ಸೇವನೆಯಿಂದಾಗಿ ಮತ್ತಷ್ಟು ಆತಂಕಗೊಳ್ಳುವ

ಯೆಹೋವನು ನಿಮಗೆ ಮುಂಬಲವಾಗಿ ಮುಂದರಿಯುವನು, ಇಸ್ರಾಯೇಲನ ದೇವರು ನಿಮಗೆ ಹಿಂಬಲವಾಗಿಯೂ ಇರುವನು (ಯೆಶಾ. 52:12).

ಸಾಧ್ಯತೆಗಳಿರುತ್ತವೆ. ಜೊತೆಗೆ, ತೀವ್ರ ನಿದ್ರಾಹೀನತೆಯೂ ಸಹ ಆತನನ್ನು ಬಾಧಿಸಬಹುದು. ಇಷ್ಟು ಮಾತ್ರವಲ್ಲದೆ, ಚಹಾ ಹಾಗೂ ಕಾಫಿ ಸೇವನೆಯು, ಮಾನಸಿಕ ಒತ್ತಡದಿಂದಾಗಿ ಬರುವ ಜಠರದ ಹುಣ್ಣಿನ ಬಾಧೆಯನ್ನು ತೀವ್ರಗೊಳಿಸಬಹುದು. ಆದರೆ, ಇದಕ್ಕೆ ತದ್ವಿರುದ್ಧವಾಗಿ, ಚಾಕೋಲೇಟ್‌ನಲ್ಲಿರುವ ಹೆಚ್ಚಿನ ಪ್ರಮಾಣದ ಮೆಗ್ನೇಷಿಯಂ ಅಂಶವು, ಒತ್ತಡದಿಂದಾಗಿ ಉತ್ತೇಜಿತನಾದ ವ್ಯಕ್ತಿಯ ಆತಂಕವನ್ನು ಕಡಿಮೆಗೊಳಿಸಬಲ್ಲದು. ಮೊಟ್ಟೆಯ ಹಳದಿ ಭಾಗದಲ್ಲಿ ಕೊಲೆಸ್ಟ್ರಾಲ್ ಪ್ರಮಾಣವು ಹೆಚ್ಚಾಗಿರುವ ಕಾರಣ, ಮಾನಸಿಕ ಒತ್ತಡದ ಸಂದರ್ಭದಲ್ಲಿ ಈ ಆಹಾರವನ್ನು ಸೇವಿಸಿದರೆ, ಕೊಲೆಸ್ಟ್ರಾಲ್ ತನ್ನಷ್ಟಕ್ಕೇ ಮತ್ತಷ್ಟು ಹೆಚ್ಚಾಗುವ ಸಾಧ್ಯತೆಗಳಿವೆ. ಇದೇ ಕಾರಣಕ್ಕಾಗಿ ಬೆಣ್ಣೆ ಚೀಸ್, ಗೋಡಂಬಿ, ಬಾದಾಮಿ ಹಾಗೂ ಮಾಂಸಾಹಾರಗಳನ್ನೂ ಸಹ ಮಾನಸಿಕ ಒತ್ತಡದ ಸಂದರ್ಭದಲ್ಲಿ ಸೇವಿಸದೇ ಇರುವುದು ಒಳ್ಳೆಯದು.

– ಸಂಗ್ರಹ.

## ಮನವಿ ಪತ್ರ

34 ವರ್ಷದ ತೋಮಸ್‌ರಾಜು ಎಂಬುವವರು ಕಳೆದ 7 ವರ್ಷದಿಂದ ಅಸ್ವಸ್ಥರಾಗಿದ್ದು, ವೈದ್ಯರು ರಕ್ತ ಕ್ಯಾನ್ಸರ್ ಎಂದು ಪತ್ತೆ ಹಚ್ಚಿದ್ದಾರೆ. ಇವರ ವೈದ್ಯಕೀಯ ಶುಶ್ರೂಷೆಗಾಗಿ 6 ರಿಂದ 7 ಲಕ್ಷಗಳು ಖರ್ಚಾಗುತ್ತದೆ.

ಇವರಿಗೆ ಸಹಾಯ ಹಸ್ತವನ್ನು ಚಾಚುವವರು ಯಾರಾದರೂ ಇರುವುದಾದರೆ ಅಥವಾ ದೇವರು ನಿಮಗೆ ಕೊಡಲು ಪ್ರೇರೇಪಿಸುವುದಾದರೆ ಈ ಕೆಳಕಂಡ ಖಾತೆಗೆ/ಹೆಸರಿನಲ್ಲಿ ಡಿ.ಡಿ. ಅಥವಾ ಚೆಕ್ ಕಳುಹಿಸಬಹುದು.

**Thomas Raju**
**A/c No. 073200101010684 (IFSC Code. CORP0000732)**
**Corparation Bank Mangalore.**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ
**ದೂರವಾಣಿ ಸಂಖ್ಯೆ : 09448164142, 09036223304.**

## ಆಶ್ರಮದ ಅವಶ್ಯಕತೆಗಳು

1. ಜನರೇಟರ್
2. 30 ಟೇಬಲ್
3. 60 ಬೆಂಚ್
4. ಟೆಂಪೋ ಟ್ರಾವಲ್ಸ್
5. ಅಕ್ಕಿ, ಸಕ್ಕರೆ, ದವಸಧಾನ್ಯ

ದಾನಿಗಳು : ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ
**9902334941, 08202002781, 09964070654.**

## ಬೇಕಾಗಿದ್ದಾರೆ

**ನರ್ಸ್ (Diploma) ಬೇಕಾಗಿದ್ದಾರೆ, ಉತ್ತಮ ವೇತನ ನೀಡಲಾಗುವುದು.**
**ಆಸಕ್ತವುಳ್ಳವರು ಸಂಪರ್ಕಿಸಬೇಕಾದ : ದೂರವಾಣಿ ಸಂಖ್ಯೆ : 9902334941.**

ಶಾಶ್ವತಕೃಪೆಯಿಂದ ನಿನ್ನನ್ನು ಕರುಣಿಸುವೆನು ಎಂದು ನಿನ್ನ ವಿಮೋಚಕನಾದ ಯೆಹೋವನು ಅನ್ನುತ್ತಾನೆ (ಯೆಶಾ. 54:8).

# ಯೌವನಸ್ಥರ ಸ್ವರ

# ಪುನರ್‌ಸ್ಥಾಪನೆ

ಕ್ರಿಸ್ತನಲ್ಲಿ ಪ್ರಿಯ ಸಹೋದರ ಮತ್ತು ಸಹೋದರಿಯರೇ, ನಿಮಗೆಲ್ಲರಿಗೂ ನನ್ನ ಆತ್ಮೀಯ ವಂದನೆಗಳು. ಈಗಾಗಲೇ ನಾವು ಕಳೆದ ಸಂಚಿಕೆಯಲ್ಲಿ ನೋಡುತ್ತಾ ಬರುತ್ತಿರುವಾಗ್ಗೆ, ಕ್ರಿಸ್ತನು ನಮ್ಮ ಆತ್ಮೀಕ ಜೀವಿತವನ್ನು ಪುರ್ನಸ್ಥಾಪಿಸಲು ಸಿದ್ದನಾಗಿದ್ದಾನೆ, ಆದರೆ ನಾವಾದರೋ ನಮಗೆ ಯಾವ ಯಾವ ವಿಷಯಗಳಲ್ಲಿ ಪುರ್ನಸ್ಥಾಪನೆ ಅಗತ್ಯ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಯಾವುದರಲ್ಲಿ ಪುರ್ನಸ್ಥಾಪನೆ? ಯಾವುದಕ್ಕಾಗಿ ಪುರ್ನಸ್ಥಾಪನೆಯಾಗಬೇಕು? ಇವುಗಳನ್ನು ನಾವು ತಿಳಿದುಕೊಂಡು ನಮ್ಮ ಆತ್ಮೀಕ ಓಟವನ್ನೂ ಸ್ಥಿರಚಿತ್ತರಾಗಿ ಓಡಿ ನಮ್ಮ ರಕ್ಷಣೆಯನ್ನು ಕಾಪಾಡಿಕೊಳ್ಳಲು ಯುದ್ದಮಾಡಬೇಕಾಗಿದೆ.

**ಆತ್ಮೀಕ ಜೀವಿತ (Spiritual Life):**

ನಾವು ಆತ್ಮೀಕ ವಂಚನೆಗೆ ಒಳಗಾಗಿದ್ದೇವಾ? ಎನ್ನುವುದನ್ನು ತಿಳಿಯುವದು ಬಹು ಅವಶ್ಯವಾಗಿದೆ. ನಮ್ಮ ಆತ್ಮೀಕ ಜೀವಿತದಲ್ಲಿ ನಾವು ಎಲ್ಲಾ ವಿಷಯದಲ್ಲಿಯೂ ದೇವರ ಆಜ್ಞೆಗಳಿಗೆ ಆತನ ಚಿತ್ತಾನುಸಾರವಾಗಿ ನಡೆಯುತ್ತಿದ್ದೆನೋ, ಆತನ ವಾಕ್ಯಗಳಿಗೆ ವಿಧೇಯನಾಗಿ/ವಿಧೇಯಳಾಗಿ ನಡೆಯುತ್ತಿದ್ದೆನೋ ಎಂಬುವದನ್ನು ತಿಳಿಯುವದು ಅವಶ್ಯವಾಗಿದೆ. ನಮ್ಮ ಆತ್ಮೀಕ ಜೀವಿತದಲ್ಲಿ ಒಂದು ಉಜ್ಜೀವನ, ಪುನರ್‌ಸ್ಥಾಪನೆ ಅಗತ್ಯವಿದೆ. ನಾವು ಆತ್ಮೀಕ ಜೀವಿತದಲ್ಲಿ ನಮ್ಮ ದೇವರೊಂದಿಗೆ ಚೆನ್ನಾಗಿರುವುದಾದರೆ ನಮ್ಮ ಜೀವಿತದಲ್ಲಿ ಸುಕ್ಕು, ಕಳಂಕ ಇಲ್ಲದ ಶುದ್ದ ಕನ್ನಿಕೆಯೆಂಬಂತೆ ನಿಲ್ಲಬಹುದಾಗಿದೆ. ಅದಕ್ಕಾಗಿಯೇ ಎಫೆಸ 5:27ರಲ್ಲಿ ಹೇಳಿದ ಪ್ರಕಾರ ಸಭೆಯನ್ನು ಅಂದರೆ ವೈಯುಕ್ತಿಕವಾಗಿ ಪ್ರತಿಯೊಬ್ಬರನ್ನು ಕಳಂಕ ಸುಕ್ಕು ಮುಂತಾದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ದವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ದವಾಡಿದನು. ಮತ್ತಾಯ 5:3ರಲ್ಲಿ ಹೇಳುವ ಪ್ರಕಾರ **"ಆತ್ಮದಲ್ಲಿ ಬಡವರಾಗಿರುವವರು ಧನ್ಯರು; ಪರಲೋಕರಾಜ್ಯವು ಅವರದು". "ಯೌವನಸ್ಥನು ತನ್ನ ನಡತೆಯನ್ನು ಶುದ್ದಪಡಿಸಿಕೊಳ್ಳುವದು ಯಾವದರಿಂದ?** ನಿನ್ನ ವಾಕ್ಯವನ್ನು **ಗಮನಿಸಿ ನಡೆಯುವದರಿಂದಲೇ"** ಕೀರ್ತನೆ 119:9 **ನಿನ್ನ ವಾಕ್ಯವು ನನ್ನ ಕಾಲಿಗೆ ದೀಪವೂ ನನ್ನ ದಾರಿಗೆ ಬೆಳಕೂ ಆಗಿದೆ.** (ಕೀರ್ತನೆ 119:105)

**ವೈಯುಕ್ತಿಕ ಪ್ರಾರ್ಥನೆ (Personal prayer Life):**

ವೈಯುಕ್ತಿಕ ಪ್ರಾರ್ಥನೆ ನಮ್ಮ ಜೀವಿತದಲ್ಲಿ ಅತಿ ಪ್ರಾಮುಖ್ಯವಾದದ್ದು. **"ಯಾವಾಗಲೂ ಸಂತೋಷಿಸಿರಿ, ಎಡೆಬಿಡದೆ ಪ್ರಾರ್ಥನೆಮಾಡಿರಿ"** (1ಥೆಸ 5:18). ಪ್ರಿಯ ದೇವಜನವೇ, ದೇವರು ನಮ್ಮಿಂದ ಬಯಸುವಂಥದ್ದು ಏನು? "ಮನುಷ್ಯನೇ, ಒಳ್ಳೆಯದು ಇಂಥದ್ದೇ ಎಂದು ಯೆಹೋವನು ನಿನಗೆ ತೋರಿಸಿದ್ದಾನಷ್ಟೆ; ನ್ಯಾಯವನ್ನು ಆಚರಿಸುವದು, ಕರುಣೆಯಲ್ಲಿ ಆಸಕ್ತನಾಗಿರುವದು; ನಿನ್ನ ದೇವರಿಗೆ ನಮ್ರವಾಗಿ ನಡೆದುಕೊಳ್ಳುವದು; ಇಷ್ಟನ್ನೇ ಹೊರತು ಯೆಹೋವನು ನಿನ್ನಿಂದ ಇನ್ನೇನು ಅಪೇಕ್ಷಿಸುವನು? ನಾವು ನಮ್ಮ ವೈಯುಕ್ತಿಕ ಪ್ರಾರ್ಥನೆಯಲ್ಲಿ ಎಚ್ಚರವಾಗಿದ್ದೇವಾ? ಆತನು ಬಯಸುವ ಮಟ್ಟಿಗೆ ಬಂದಿದ್ದೇವಾ? ಎನ್ನುವ ಪ್ರಶ್ನೆಯನ್ನು ನಮಗೆ ನಾವೇ ಕೇಳಿಕೊಳ್ಳಬೇಕಾಗಿದೆ. ಇಂದು ನಮ್ಮ ವೈಯುಕ್ತಿಕ ಪ್ರಾರ್ಥನೆಯಲ್ಲಿ ಪುನರ್‌ಸ್ಥಾಪನೆ ಆಗಬೇಕಾಗಿದೆ. ಅದಕ್ಕಾಗಿ ನಾವು ದೇವರ ಸಮ್ಮುಖದಲ್ಲಿ ಅಳಬೇಕಾಗಿದೆ ಮತ್ತು ಪ್ರಾರ್ಥಿಸಬೇಕಾಗಿದೆ.

**ಶಾರೀರಿಕ ಜೀವಿತ (Physical Life):**

ನಮ್ಮ ಶಾರೀರಿಕ ಅಥವಾ ಬಾಹ್ಯ ಜೀವಿತ (Outlook appearance) ಇತರರಿಗೆ ಮಾದರಿಯಾಗಿದೆಯೋ? ಇತರರನ್ನು ಕ್ರಿಸ್ತನ ಕಡೆಗೆ ನಡೆಸುವಂತದ್ದಾಗಿದೆಯೋ ಅಥವಾ ಇತರರನ್ನು ಪಾಪಕ್ಕೆ ಪ್ರೇರೆಪಿಸುವಂಥದ್ದಾಗಿದೆಯೋ ಅಥವಾ ಪ್ರಶ್ನಿಸುವಂಥದ್ದಾಗಿದೆಯೋ? ಪೌಲನು (1ತಿಮೊಥಿ 4:12) ರಲ್ಲಿ ತಿಮೊಥಿಯನಿಗೆ ಹೇಳುವಂತೆ ಇಂದು ನಾನು ಇದನ್ನು ಓದುತ್ತಿರುವ ಯೌವನಸ್ಥ ಯೌವನಸ್ಥರಿಗೆ ಹೇಳುವದನೆಂದರೆ, **ಯೌವನಸ್ಥನೆಂದು ನಿನ್ನನ್ನು ಅಸಡ್ಡೆಮಾಡುವದಕ್ಕೆ ಯಾರಿಗೂ ಅವಕಾಶಕೊಡದೆ ನಂಬುವವರಿಗೆ ನಡೆ, ನುಡಿ, ಪ್ರೀತಿ, ನಂಬಿಕೆ, ಶುದ್ದತ್ವ ಇವುಗಳ ವಿಷಯದಲ್ಲಿ ನೀನೇ ಮಾದರಿಯಾಗಿರು.** ಅನೇಕ ಸಲ ನಾವು ಶರೀರದಲ್ಲಿ ಬಾಧೆಯನ್ನು ಅನುಭವಿಸುವದರಿಂದ

ನಾನು ನಿಮಗೆ ಕೊಟ್ಟ ಆಜ್ಞೆಗಳಗೆ ಸರಿಯಾಗಿ ನೀವು ನಡೆದರೆ ನೀವು ನನ್ನ ಸ್ನೇಹಿತರು (ಯೋಹಾ. 15:14).

ಶರೀರದಲ್ಲಿ ನಾವು ಮಾದರಿಯಾಗಿ ಜೀವಿಸುವದು ಅಸಾಧ್ಯ ಎಂಬ ಮನೋಭಾವಕ್ಕೆ ಬಂದುಬಿಡುತ್ತೇವೆ. ಆದರೆ ಸತ್ಯವೇದವು (1 ಪೇತ್ರ 4:1)ರಲ್ಲಿ **"ಕ್ರಿಸ್ತನು ಶರೀರದಲ್ಲಿ ಭಾದೆಪಟ್ಟದ್ದರಿಂದ ನೀವು ಸಹ ಆತನಿಗಿದ್ದ ಭಾವವನ್ನೇ ಹಿಡಿದುಕೊಳ್ಳಿರಿ. ಯಾಕೆಂದರೆ ಶರೀರದಲ್ಲಿ ಭಾದೆಪಟ್ಟವನು ಪಾಪದ ವಶದಿಂದ ತಪ್ಪಿಸಿಕೊಂಡವನಾಗಿ ಉಳಿದಿರುವ ತಮ್ಮ ಜೀವಮಾನಕಾಲದಲ್ಲಿ ಇನ್ನು ಮನುಷ್ಯರ ಅಭಿಲಾಷೆಗಳ ಪ್ರಕಾರ ಬದುಕದೆ ದೇವರ ಚಿತ್ತದ ಪ್ರಕಾರ ಬದುಕುವದಕ್ಕೆ ಪ್ರಯತ್ನ ಮಾಡುವನು"**. ಹೀಗೆ ನಾವು ಭಾದೆಗಳ ನಿಮಿತ್ತ ಲೋಕದ ಅಭಿಲಾಷೆಗಳಿಗೆ ತಪ್ಪಿಸಿಕೊಳ್ಳುತ್ತೇವೆ. **ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತದೆ** ಎಂದು ನಮಗೆ ಗೊತ್ತದೆ ಎಂದು (ರೋಮಾಪುರ 8:28)ರಲ್ಲಿ ಹೇಳುತ್ತದೆ. ಲೋಕದಲ್ಲಿರುವಾಗ ನಮ್ಮ ಶರೀರದಾಶೆ, ಕಣ್ಣಿನಾಶೆ ನಮ್ಮನ್ನು ಕಾಡಿದಾಗ್ಲೂ **"ದೇವರಿಂದ ಹುಟ್ಟುವಂಥದೆಲ್ಲವೂ ಲೋಕವನ್ನು ಜಯಿಸುತ್ತದೆ"** ಎಂಬುದಾಗಿ ನೋಡುತ್ತೇವೆ.

ನಾವು ನಮ್ಮ ಜೀವಿತವನ್ನು ದೇವರಿಗೆ ಮೀಸಲಾಗಿಯೂ ಸಜೀವಯಜ್ಞವಾಗಿಯೂ ಅರ್ಪಿಸೋಣ. ದೇವರು ನಿಮ್ಮ ಜೀವಿತದಲ್ಲಿ ಆತ್ಮೀಕವಾಗಿಯೂ ಶಾರೀರಿಕವಾಗಿಯೂ ಪುನರ್‌ಸ್ಥಾಪಿಸಲು ಉಜ್ಜೀವನವನ್ನು ತರುವದಕ್ಕೆ ಸಿದ್ಧನಾಗಿದ್ದಾನೆ. ನೀನು ಸಿದ್ಧನಿರುವಿಯೋ ???

ಪ್ರೀತಿಸ್ವರೂಪನಾದ ದೇವರು ಪರಲೋಕದ ಸುವರಗಳಿಂದ ನಿಮ್ಮನ್ನು ಆಶೀರ್ವದಿಸಲಿ,

ಕ್ರಿಸ್ತನಲ್ಲಿ ನಿಮ್ಮ ಆತ್ಮೀಯ ಸೇವಕ,
ಪಾ॥ ಜಾನ್ ಸ್ಟೀಫನ್ ಮೊಂತೆರೋ
ಕೋರಮಂಗಲ, ಬೆಂಗಳೂರು

## ಪ್ರಾರ್ಥನಾ ಮನವಿಗಳು

- **ದೇವರ ಸ್ವರ ಮಾಸ ಪತ್ರಿಕೆಯ ಸೇವೆಯನ್ನು ಕರ್ತನು ವಿಸ್ತರಿಸುವುದಕ್ಕಾಗಿ, ಸೇವೆಯ ಎಲ್ಲಾ ಅವಶ್ಯಕತೆಗಳು ಸಂಧಿಸಲ್ಪಡುವುದಕ್ಕಾಗಿ ಪ್ರಾರ್ಥಿಸಿರಿ.**
- **ನಮ್ಮ ದೇಶವನ್ನು ಕರ್ತನು ಆಶೀರ್ವದಿಸುವಂತೆ ಆರ್ಥಿಕ ಸಮಸ್ಯೆಗಳು ನೀಗಿ ಸಮೃದ್ಧಿಯುಳ್ಳ ದೇಶವಾಗಿ ಮಾರ್ಪಡುವಂತೆ ಪ್ರಾರ್ಥಿಸಿರಿ.**
- **ನಮ್ಮ ದೇಶವನ್ನು, ರಾಜ್ಯವನ್ನು ಆಳ್ವಿಕೆ ಮಾಡುತ್ತಿರುವ ಪ್ರತಿಯೊಂದು ಅಧಿಕಾರಿಗಳು ಪ್ರಮಾಣಿಕರಾಗಿ ನಿಷ್ಠೆಯಿಂದ ದೇಶಕ್ಕೆ ಸೇವೆಸಲ್ಲಿಸುವಂತೆ ಪ್ರಾರ್ಥಿಸಿರಿ.**
- **ನಮ್ಮ ದೇಶದಲ್ಲಿ ನಡೆಯುತ್ತಿರುವ ಭಯೋತ್ಪಾದನೆ, ಭ್ರಷ್ಟಾಚಾರ, ಮೋಸ ವಂಚನೆಗಳು ನೀಗುವಂತೆ ಪ್ರಾರ್ಥಿಸಿರಿ.**
- **ನಮ್ಮ ದೇಶದಲ್ಲಿರುವ ನೀರಿನ, ಆಹಾರದ, ವಿದ್ಯುತ್‌ಚ್ಛಕ್ತಿಯ ಕೊರತೆಗಳು ನೀಗುವುದಕ್ಕಾಗಿ ಪ್ರಾರ್ಥಿಸಿರಿ.**

## ಡಿಜಿಎಮ್ ಬೇತೇಲ್ ಅಂಕಣ

- **ಪಾ॥ ಸುನಿಲ್ ಜಾನ್ ಡಿ'ಸೋಜಾ ರವರು ಬಾಂಬೆ ಪಟ್ಟಣದಲ್ಲಿ ಕರ್ತನ ಸೇವೆಮಾಡಿ ಬರುವಂತೆ ಕರ್ತನು ಕೃಪೆ ಕೊಟ್ಟಿದ್ದಾನೆ.**
- **ಬಹರೈನ್ ಫಿಲದೆಲ್ಫಿಯ ಕನ್ನಡ ಸಭೆಯ 5ನೇ ವಾರ್ಷಿಕೋತ್ಸವದಲ್ಲಿ ಪಾ॥ ಸುನಿಲ್‌ರವರು ಭಾಗವಹಿಸುವಂತೆ ಕರ್ತನು ಕೃಪೆಕೊಟ್ಟಿದ್ದಾನೆ.**
- **ಪುಷ್ಪಾ, ಶೋಭಾ, ಸೌಮ್ಯ, ಆಶಾರವರು ವಿಶ್ವಾಸದ ಮನೆ ಅನಾಥಾಶ್ರಮದಲ್ಲಿ ಆರೈಕೆ ಹೊಂದಿ ಕರ್ತನ ಕೃಪೆಯಿಂದ ಗುಣಮುಖರಾಗಿ ತಮ್ಮ ಕುಟುಂಬಕ್ಕೆ ತೆರಳಿದ್ದಾರೆ.**

ಕರ್ತನು ನನ್ನ ಸಹಾಯಕನು, ಭಯಪಡೆನು
(ಇಬ್ರಿ. 13:6).

# ಈ ವಾಕ್ಯಗಳು ಎಲ್ಲಿವೆ?

ಮಕ್ಕಳ ಸ್ವರ

1) ಭೂಮ್ಯಾಕಾಶಗಳೂ ಅವುಗಳಲ್ಲಿರುವ ಸಮಸ್ತವೂ ನಿರ್ಮಿತವಾದವು?

2) ಯೆಹೋವನಿಗೆ ಕೃತಜ್ಞತಾ ಸ್ತುತಿ ಮಾಡಿರಿ; ಆತನು ಒಳ್ಳೆಯವನು?

3) ನೀವು ಭೂಮಿಗೆ ಉಪ್ಪಾಗಿದ್ದೀರಿ?

4) ದೋಷಿಯ ದಾರಿ ಡೊಂಕು?

5) ನೀವು ನನ್ನನ್ನು ಅರಿತಿದ್ದರೆ ನನ್ನ ತಂದೆಯನ್ನು ಅರಿಯುತ್ತಿದ್ದಿರಿ?

6) ನನ್ನ ಆಲಯವು ಎಲ್ಲಾ ಜನಾಂಗಗಳಿಗೂ ಪ್ರಾರ್ಥನಾಲಯವೆನಿಸಿಕೊಳ್ಳುವುದು?

7) ನನ್ನ ತಂದೆಯು ಎಲ್ಲವನ್ನೂ ನನಗೆ ಒಪ್ಪಿಸಿದ್ದಾನೆ?

8) ಯೌವನದಲ್ಲಿ ನೊಗ ಹೊರುವುದು ಮನುಷ್ಯನಿಗೆ ಲೇಸು?

9) ಸಬ್ಬತ್‌ದಿನದಲ್ಲಿ ಕೆಲಸವೇನಾದರೂ ಮಾಡುವವನಿಗೆ ಮರಣ ಶಿಕ್ಷೆಯಾಗಬೇಕು?

10) ಯೆಹೋವನು ನನಗೆ ಕುರುಬನು; ಕೊರತೆಪಡೆನು?

---

## ಜುಲೈ ತಿಂಗಳ ಬೈಬಲ್ ಕ್ವಿಜ್ ಪ್ರಶ್ನೆಗಳ ಉತ್ತರಗಳು :

1. 10 ಮಂದಿ ಇರುವುದಾದರೆ.
2. ಅಂದರೆ ಅಪ್ರಿಯಳು ಅಥವಾ ಪಿತೃವಾತ್ಸಲ್ಯವನ್ನರಿಯದವಳು (ಹೋಶೆ. 1:6).
3. ಅಂದರೆ ನನ್ನ ಪ್ರಜೆಯಲ್ಲ (ಹೋಶೆ. 1:9).
4. ಕೂಷಿಯ (ಚೆಫ. 1:1).
5. ಅಬೀನಾದಾಬನ ಮಗನನ್ನು (1 ಅರಸು. 4:11)
6. ಯೋಸೇಫನು.
7. ಸ್ನಾನಿಕನಾದ ಯೋಹಾನನು.
8. ಯೆಹೂದೀತಳು ಮತ್ತು ಬಾಸೆಮತಳು (ಆದಿ. 26:34).
9. ಸಾವಿರ ಮಂದಿ (1000) 1 ಅರಸು. 11:3.
10. ಜ್ಞಾನೋಕ್ತಿಗಳು ಮೂರು ಸಾವಿರ, ಗೀತಗಳು ಸಾವಿರದ ಐದು (1 ಅರಸು. 4:32).
11. ‘ದೇವರ ಸಂಗಡಲೂ ಮನುಷ್ಯರ ಸಂಗಡಲೂ ಹೋರಾಡಿದ ಮನುಷ್ಯ” (ಆದಿ. 32:28).
12. ದಿಬ್ಲಯಿಮನ ಮಗಳಾದ ಗೋಮೆರಳು (ಹೋಶೆ. 1:3).
13. ಮೆತೂಷೆಲಹನು (ಆದಿ. 5:27).
14. ಸೊಲೊಮೋನನ ಮಗನು (1 ಅರಸು. 11:43, 12:23).
15. ಶೂನೇಮ್ ಊರಿನ ಅಬೀಷಗ್ (1 ಅರಸು. 1:3).

ನಾನು ನಿನ್ನನ್ನು ನಿರ್ಮಿಸಿದೆನು, ನೀನು ನನ್ನ ಸೇವಕನು, ನಿನ್ನನ್ನು ಮರೆತುಬಿಡೆನು
(ಯೆಶಾ. 44:21).

## ತಿಳುವಳಿಕೆಯ ಸ್ವರ

# ಹಳೆಯ ಒಡಂಬಡಿಕೆಯ ಪುಸ್ತಕಗಳ ಸಂಗ್ರಹ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**ಆಂಗ್ಲೋಸಾಕ್ಸನ್ ಸತ್ಯವೇದ :**

ಐದನೇ ಶತಮಾನದವರೆಗೆ ಇಂಗ್ಲೆಂಡ್ ಕ್ರೈಸ್ತ ರಾಜ್ಯವಾಗಿರಲಿಲ್ಲ. ಇಂಗ್ಲೆಂಡಿನಲ್ಲಿ ಆಂಗ್ಲೋ ಸಾಕ್ಸನ್ ಭಾಷೆಯನ್ನಾಡುತ್ತಿದ್ದರು. ಸಿಯೋಡ್‌ಮನ್ (Caedmon) ಎಂಬ ಅವಿದ್ಯಾವಂತ ಕ್ರೈಸ್ತ ದನಕಾಯುವ ಹುಡುಗನು ಆಂಗ್ಲೋಸಾಕ್ಸನ್ ಭಾಷೆಯಲ್ಲಿ ಸತ್ಯವೇದದ ಕಥೆಗಳನ್ನು ಅಲ್ಲಿಯ ಜನರು ಹಾಡಲು ಸಂಗೀತಗಳಾಗಿ ಬರೆದನು. ಜನರು ತಾವು ಕೆಲಸ ಮಾಡುವಾಗ ಈ ಸಂಗೀತಗಳನ್ನು ಹಾಡುತ್ತಿದ್ದರು. ಇದು ಸತ್ಯವೇದವನ್ನು ಆಂಗ್ಲೋಸಾಕ್ಸನ್ ಭಾಷೆಗೆ ಭಾಷಾಂತರಿಸಲು ನಾಂದಿಯಾಯಿತು. ಎಂಟನೇ ಶತಮಾನದಲ್ಲಿ ಲಾತೀನ್ ಭಾಷೆಯಿಂದ ಆಂಗ್ಲೋಸಾಕ್ಸನ್ ಭಾಷೆಗೆ ಸತ್ಯವೇದವು ಭಾಷಾಂತರಿಸಲ್ಪಟ್ಟಿತು. ವೆನೆರೆಬಲ್ ಬೇಡಿ (venerable bede) ಎಂಬ ದೇವರ ಸೇವಕನು ಮೂವರು ಯೌವನಸ್ಥರ ಸಹಾಯದಿಂದ ಅವನ ಮರಣದ ಹಾಸಿಗೆಯಲ್ಲಿ ಯೋಹಾನನ ಸುವಾರ್ತೆಯನ್ನು ಸಂಪೂರ್ಣವಾಗಿ ಭಾಷಾಂತರಿಸಿದನು. ಅವನ ನಂತರ ಅರಸನಾದ ಮಹಾ ಆಲ್ಫ್ರೆಡ್ಡನು (king Alfred the great)ಸ್ವಲ್ಪ ಕೆಲಸ ಮಾಡಿದನು. ಆ ಮೇಲೆ ಇಬ್ಬರು ಸನ್ಯಾಸಿಗಳು (monks) ಸಂಪೂರ್ಣವಾಗಿ ಭಾಷಾಂತರಿಸಿದರು.

**ಪ್ರಪ್ರಥಮ ಕೈಬರಹದ ಆಂಗ್ಲಭಾಷೆಯ ಸತ್ಯವೇದ :**

ಹದಿನಾಲ್ಕನೇ ಶತಮಾನದಲ್ಲಿ ಆಂಗ್ಲೋಸಾಕ್ಸನ್ ಭಾಷೆಯ ಬದಲಾಗಿ ಆಂಗ್ಲ ಭಾಷೆಯು ಪ್ರಾರಂಭವಾಯಿತು. ಆ ಸಮಯದಲ್ಲಿ ಸಭಾಧಿಕಾರಿಗಳು ಸತ್ಯವೇದವನ್ನು ಸಾಮಾನ್ಯ ಭಾಷೆಗಳಿಗೆ ಭಾಷಾಂತರ ಮಾಡಕೂಡದು ಎಂಬ ನಿರ್ಬಂಧದ ಕಾನೂನು ಮಾಡಿದರು. ಆದರೆ ವೇದ ಪಂಡಿತನೂ ಪಾದ್ರಿಯೂ ಆಗಿದ್ದ ಜಾನ್ ವಿಕ್ಲಿಫ್ (John wycliff) ಎಂಬಾತನು ಸತ್ಯವೇದವನ್ನು ಜನಸಾಮಾನ್ಯರು ಓದುವಂತಾಗಬೇಕೆಂದು ನಿಷ್ಕರ್ಶಿಸಿದನು. ಇವನು ಇತರ ವೇದ ಪಂಡಿತರ ಸಹಾಯದಿಂದ ತನ್ನ ಪ್ರಾಣಾಪಾಯದ ದೆಸೆಯಲ್ಲಿಯೂ ರಹಸ್ಯವಾಗಿ ಇಪ್ಪತ್ತೆರಡು ವರ್ಷಗಳ ಸತತ ಪ್ರಯತ್ನದಿಂದ 1383ರಲ್ಲಿ ಆಂಗ್ಲ ಭಾಷೆಯ ಸತ್ಯವೇದವನ್ನು ಸಂಪೂರ್ಣಗೊಳಿಸಿದನು. ಈ ಸಮಯದಲ್ಲಿ ಸತ್ಯವೇದವನ್ನು ಸಂಧಿ/ಅಧ್ಯಾಯಗಳನ್ನಾಗಿ ವಿಭಾಗಿಸಲಾಯಿತು. ಒಂದು ನೂರ ಐವತ್ತು ವರ್ಷಗಳವರೆಗೆ ಈ ಆಂಗ್ಲ ಭಾಷೆಯ ಸತ್ಯವೇದವೇ ಬಳಕೆಯಲ್ಲಿತ್ತು.

ಆ ಸಮಯದಲ್ಲಿ ಮುದ್ರಣಾಲಯಗಳು ಇರಲಿಲ್ಲವಾದ ಕಾರಣ ಪ್ರತಿಗಳನ್ನು ಕೈಬರಹಗಳಿಂದಲೇ ಬರೆಯಬೇಕಾಗಿತ್ತು. ಇದಕ್ಕೆ ಬಹಳಷ್ಟು ಸಮಯವೂ, ಪ್ರಯತ್ನವೂ ಬೇಕಾಗಿತ್ತು. ಮಾತ್ರವಲ್ಲದೆ ಬಹಳ ಗೋಪ್ಯವಾಗಿ ಮಾಡಬೇಕಾಗಿತ್ತು. ವಿಕ್ಲಿಫ್‌ನ ಹಿಂಬಾಲಕರನ್ನು ಲಲ್ಲಾರ್ಡ್ಸ್ ಎಂದು ಕರೆಯುತ್ತಿದ್ದರು. ಇವರು ರಹಸ್ಯ ಸ್ಥಳಗಳಿಗೆ ಹೋಗಿ ಸತ್ಯವೇದದ ಕೆಲವು ಭಾಗಗಳನ್ನು ಬರೆಯುತ್ತಿದ್ದರು. ಈ ರೀತಿಯಾಗಿ ಬರೆಯುವವರು ಸಿಕ್ಕಿದರೆ ಅಂಥವರನ್ನು ಶಿಕ್ಷಿಸುತ್ತಿದ್ದರು. ಕೆಲವರನ್ನು ಸಜೀವವಾಗಿ ಸುಡುತ್ತಿದ್ದರು. ವಿಕ್ಲಿಫನು ಸತ್ತು ಹೂಣಲ್ಪಟ್ಟರೂ ಇವರ ಶವವನ್ನು ಅಗೆದು ತೆಗೆದು ಸುಟ್ಟು ಹಾಕಿದರು. ಇಷ್ಟೆಲ್ಲಾ ಹಿಂಸೆಗಳಿದ್ದರೂ ಸತ್ಯವೇದವು ಜನಸಾಮಾನ್ಯರಲ್ಲಿ ಪ್ರಸಿದ್ಧಿಗೆ ಬಂದಿತು. ಕೈಬರಹಗಳಿಂದ ಬರೆದ ಸತ್ಯವೇದದ ಬೆಲೆಯು ಹೆಚ್ಚಾಗಿದ್ದು ಜನಸಾಮಾನ್ಯರು ಕೊಂಡುಕೊಳ್ಳುವುದು ಅಸಾಧ್ಯವಾದ ಕಾರಣ ಹಲವು ಜನರು ಒಟ್ಟಾಗಿ ಸೇರಿ ಸತ್ಯವೇದವನ್ನು ಕೊಂಡುಕೊಂಡು ಸಾಮೂಹಿಕವಾಗಿ ಸೇರಿ ಓದಿಸಿ ಕೇಳುತ್ತಿದ್ದರು.

**ಪ್ರಥಮ ಮುದ್ರಿಸಲ್ಪಟ್ಟ ಸತ್ಯವೇದ :**

ಪ್ರಪ್ರಥಮವಾಗಿ ಚೈನಾ ದೇಶದವರು ಮುದ್ರಣ ಯಂತ್ರವನ್ನು ಕಂಡುಹಿಡಿದರೆಂದು ಭಾವಿಸಲಾಗದೆ ಕ್ರಿ.ಶ. 1450ರಲ್ಲಿ ಯುರೋಪಿನಲ್ಲಿ ಜರ್ಮನ್ ದೇಶದ ಜಾನ್ ಗುಟ್ಟೆನ್ ಬರ್ಗ್ ಎಂಬಾತನು ಮುದ್ರಣಯಂತ್ರವನ್ನು ಕಂಡುಹಿಡಿದು ಮೊದಲು ಮುದ್ರಿಸಿದ ಪುಸ್ತಕ ಲಾತೀನ್ ಭಾಷೆಯ ಸತ್ಯವೇದವು. ನಂತರ ಐವತ್ತು ವರ್ಷಗಳಲ್ಲಿ ಸತ್ಯವೇದದ ಅನೇಕ ಭಾಗಗಳನ್ನು ಯುರೋಪಿನ ಹಲವು ಭಾಷೆಗಳಲ್ಲಿ ಮುದ್ರಿಸಲಾಯಿತು. ಕೆಕ್ಸ್‌ಟನ್ (caxton) ಎಂಬಾತನು ಇಂಗ್ಲೆಂಡ್‌ನಲ್ಲಿ ಮುದ್ರಣ ಮಾಡಲು ಪ್ರಾರಂಭಿಸಿ ಸತ್ಯವೇದದ ಅನೇಕ ಕಥೆಗಳನ್ನು ಆಂಗ್ಲ ಭಾಷೆಯಲ್ಲಿ ಮುದ್ರಿಸಿ ಪುಸ್ತಕಗಳನ್ನಾಗಿ ಮಾಡಿದನು.

**ಪ್ರಥಮ ಮುದ್ರಿಸಲ್ಪಟ್ಟ ಆಂಗ್ಲಭಾಷೆಯ ಹೊಸ ಒಡಂಬಡಿಕೆ :**

ಹದಿನಾರನೇ ಶತಮಾನದ ಮೊದಲನೇ ಭಾಗದ ವರೆಗೆ ಆಂಗ್ಲ ಭಾಷೆಯ ಸತ್ಯವೇದವು ಹಸ್ತಪ್ರತಿಗಳಲ್ಲಿದ್ದವು. ಇದೇ ಶತಮಾನದಲ್ಲಿ ಸತ್ಯವೇದವನ್ನು ಆಂಗ್ಲಭಾಷೆಗೆ ತರ್ಜಿಮೆ ಮಾಡಲು ಬಹಳ ಆಕ್ಷೇಪಣೆಯೂ ಇತ್ತು. ದೇವರ ರಕ್ಷಣಾನುಭವವಿದ್ದ ವಿಲ್ಲಿಯಂ ಟೆಂಡೇಲ್ ಎಂಬಾತನು, ತನ್ನ ದೇಶದ ಜನರೆಲ್ಲರೂ ಇದೇ ಅನುಭವಕ್ಕೆ ಬರಲೆಂದು ಹಂಬಲಿಸುತ್ತಿದ್ದನು. ಇಂಥ ಅನುಭವವು ಬರಬೇಕಾದರೆ ತಮ್ಮದೇ ಆದ ಮಾತೃ ಭಾಷೆಯಲ್ಲಿಯೇ ಸತ್ಯವೇದವನ್ನು ಒದಗಿಸುವುದೊಂದೇ ಮಾರ್ಗವೆಂದು ಭಾವಿಸಿ, ಪ್ರತಿ ಸಾಮಾನ್ಯ ವ್ಯಕ್ತಿಗೂ ಸತ್ಯವೇದದ ಪರಿಚಯವಿರಬೇಕೆಂದು ವಿಲ್ಲಿಯಂ ಟೆಂಡೇಲ್‌ನ ಅಭಿಲಾಷೆಯಾಗಿತ್ತು. ಆದರೆ ಸಭೆಯು ಅಧಿಕಾರಿಗಳು ಇದಕ್ಕೆ ಸಹಕರಿಸಲಿಲ್ಲ. ಕಡೆಗೆ ಒಬ್ಬ ವ್ಯಾಪಾರಿ ಸಾಹುಕಾರನು

ನಮ್ಮ ಹಿತಕ್ಕಾಗಿ ನೀನು ಮಾಡಿದ ಆಲೋಚನೆಗಳೂ ಅದ್ಭುತಕಾರ್ಯಗಳೂ ಎಷ್ಟೋ ವಿಶೇಷವಾಗಿವೆ (ಕೀರ್ತ. 40:5).

ಸಹಾಯ ಮಾಡಿದ್ದರಿಂದ ಟೆಂಡೇಲನು ಜರ್ಮನಿಗೆ ಹೋದನು. ಅಲ್ಲಿಯೂ ಸಹ ಸ್ಥಳದಿಂದ ಸ್ಥಳಕ್ಕೆ ಅಲೆದು ರಹಸ್ಯವಾಗಿ ಕೆಲಸ ಮಾಡಬೇಕಾಯಿತು. ಕಟ್ಟಕಡೆಗೆ ಹೊಸ ಒಡಂಬಡಿಕೆಯ ಭಾಗವನ್ನು ಪ್ರಥಮವಾಗಿ 1525ರಲ್ಲಿ ಹೊರತಂದನು. ಗ್ರೀಕ್ ಭಾಷೆಯ ಮತ್ತು ಲೂಥರನ ಜರ್ಮನ್ ಭಾಷೆಯ ಹೊಸ ಒಡಂಬಡಿಕೆಯನ್ನು ಸಭಾನಾಯಕರು ಬಹಳವಾಗಿ ಆಕ್ಷೇಪಿಸಿದರು. ಆದುದರಿಂದ ಟೆಂಡೇಲ್ ಹಾಗೂ ಈತನ ಸ್ನೇಹಿತನಾದ ವ್ಯಾಪಾರಿ ಸಾಹುಕಾರನು, ಗೋಧಿಯ ಚೀಲಗಳಲ್ಲಿ, ಬಟ್ಟೆಯ ಕಟ್ಟುಗಳಲ್ಲಿ ಹೊಸ ಒಡಂಬಡಿಕೆಯ ಪ್ರತಿಗಳನ್ನು ಜರ್ಮನಿಯಿಂದ ಇಂಗ್ಲೆಂಡಿಗೆ ಕಳ್ಳಸಾಗಾಣಿಕೆ ಮಾಡಬೇಕಾಯಿತು. ಆದಾಗ್ಯೂ ಟೆಂಡೇಲನು ನಿರಾಶನಾಗಲಿಲ್ಲ. ಭಾಷಾಂತರವನ್ನು ಇನ್ನೂ ಅಂದಗೊಳಿಸಬೇಕೆಂಬ ಹಂಬಲದಲ್ಲಿ ಮುಂದಾದನು. ನಂತರ ಇವನ ಒಬ್ಬ ಸ್ನೇಹಿತನು ದ್ರೋಹ ಬಗೆದುದ್ದರಿಂದ ಈತನನ್ನು ಸೆರೆಹಿಡಿದು ಸೆರೆಮನೆಗೆ ಹಾಕಿದರು. ಬಂದಿಖಾನೆಯಲ್ಲಿಯೂ ಟೆಂಡೇಲನು ಭಾಷಾಂತರದ ಕೆಲಸವನ್ನು ಮುಂದುವರಿಸಿದನು. ನಂತರ ಈತನಿಗೆ ಮರಣದಂಡನೆಯ ಶಿಕ್ಷೆಯನ್ನು ವಿಧಿಸಿದರು. 1563ನೇ ಇಸವಿ ಅಕ್ಟೋಬರ್ ತಿಂಗಳ 6ನೇ ತಾರೀಕಿನಲ್ಲಿ ಈತನನ್ನು ಕತ್ತು ಹಿಸುಕಿ ಕೊಂದರು. ಈತನ ಶರೀರವನ್ನು ದೀವಟಿಗೆ ಯೋಪಾದಿಯಲ್ಲಿ ಸುಟ್ಟುಹಾಕಿದರು. **"ಕರ್ತನೇ, ಇಂಗ್ಲೆಂಡಿನ ಅರಸನ ಕಣ್ಣುಗಳನ್ನು ತೆರೆ"** ಎಂಬುದು ಈತನ ಕಡೇ ಪ್ರಾರ್ಥನೆಯಾಗಿತ್ತು.

ಟೆಂಡೇಲನಿಗೆ ಮರಣದಂಡನೆ ಶಿಕ್ಷೆ ವಿಧಿಸಿದ ಇಂಗ್ಲೆಂಡಿನ ಅರಸನ ಮತ್ತು ಟೆಂಡೇಲನ ಕೆಲಸಗಳಿಗೆ ಅಡ್ಡಿ ಮಾಡುತ್ತಿದ್ದ ಬಿಶೋಪರು, ಈತನು ಪ್ರಾರಂಭಿಸಿದ ಕೆಲಸಗಳನ್ನು ಪೂರೈಸಲು ಅನುಮತಿ ಕೊಟ್ಟರು. ಕೊವರ್‌ಡೇಲ್ (coverdale) ಮತ್ತು ಜಾನ್ ರೋಜರ್ (John Roger) ಎಂಬುವವರು ಟೆಂಡೇಲನ ಕೆಲಸವನ್ನು ಪೂರೈಸಿ, ಈ ಸತ್ಯವೇದಕ್ಕೆ "ಮ್ಯಾಥ್ಯೂ ಸತ್ಯವೇದ" (Mathew bible) ಎಂದು ಹೆಸರಿಸಿದರು. ಒಂದು ವೇಳೆ ಮ್ಯಾಥ್ಯೂ ಎಂಬಾತನು ಭಾಷಾಂತರದ ಕೆಲಸಕ್ಕೆ ಹಣ ಸಹಾಯ ಮಾಡಿರಬಹುದು, ಇಲ್ಲವೇ ಜಾನ್ ರೋಜರನ ಅಡ್ಡ ಹೆಸರು ಮ್ಯಾಥ್ಯೂ ಎಂದಿರಬಹುದೆಂದು ಊಹಿಸಲಾಗಿದೆ.

ರೋಮ್ ಸಾಮ್ರಾಜ್ಯದ ಕೆಥೋಲಿಕರ ರಾಣಿಯ ಕಾಲದಲ್ಲಿ ಜಾನ್‌ರೋಜರನ್ನು ಜೀವಸಹಿತ ಸುಟ್ಟುಹಾಕಿದರು. ಕಾಲಾನಂತರ ಕೂವರ್ ಡೇಲನನ್ನು ಪುನ: ಭಾಷಾಂತರಿಸಲು ಮತ್ತು ಮುದ್ರಿಸಲು ನೇಮಕ ಮಾಡಿದರು. ಈ ಕೆಲಸವು ಕ್ರಿ.ಶ. 1539ರಲ್ಲಿ ಪೂರ್ಣಗೊಂಡಿತು. ಅರಸನು ಇದನ್ನು ನೋಡಿ"ದೇವರ ಹೆಸರಿನಲ್ಲಿ ಜನರೊಳಗೆ ಇದು ಪ್ರವೇಶಿಸಲಿ" (In the name of God. let it go forth among our people) ಎಂದು ಘೋಷಿಸಿದನು. ಈ ಸತ್ಯವೇದದ ಆಕಾರವು ಬಹು ದೊಡ್ಡದಾಗಿದ್ದುದರಿಂದ ಇದನ್ನು "ಮಹಾಸತ್ಯವೇದ" (Great bible) ಎಂದು ಕರೆದರು. ಈ ಸತ್ಯವೇದವನ್ನು ಓದಲು ರಾಜಕರಿಗೂ ಜನಸಾಮಾನ್ಯರೆಲ್ಲರಿಗೂ ಅವಕಾಶ ಕಲ್ಪಿಸಲಾಯಿತು. ಸತ್ಯವೇದವನ್ನು ಜನರೆಲ್ಲರೂ ಬಹಿರಂಗವಾಗಿ ಓದುವ ಹಾಗೆ ಡೆಸ್ಕುಗಳಿಗೂ, ಕಂಬಗಳಿಗೂ ಸರಪಣಿಗಳಿಂದ ಬಂಧಿಸಿಟ್ಟಿದ್ದರು. ಕಾರಣವೇನೆಂದರೆ ಯಾರಾದರೂ ಈ ಸತ್ಯವೇದವನ್ನು ಕದ್ದು ಒಯ್ಯಬಹುದೆಂಬ ಕಾರಣದಿಂದ ಸರಪಣಿಗಳಿಂದ ಬಂಧಿಸುತ್ತಿದ್ದರು. ಇದರಿಂದ ಈ ಸತ್ಯವೇದಕ್ಕೆ "ಬಂಧಿಸಲ್ಪಟ್ಟ ಸತ್ಯವೇದ" (The Chained Bible) ಎಂದು ಕರೆಯುತ್ತಿದ್ದರು.

ಕ್ರಿ.ಶ. 1560 ರಲ್ಲಿ ಸ್ವಿಜರ್‌ಲ್ಯಾಂಡಿನಲ್ಲಿ ಜಿನೀವಾ ಸತ್ಯವೇದವು ಪ್ರಕಟಿಸಲ್ಪಟ್ಟಿತು. ಮೊಟ್ಟಮೊದಲನೇದಾಗಿ ಈ ಸತ್ಯವೇದದಲ್ಲಿ ವಚನಗಳಾಗಿ ವಿಭಾಗಿಸಲ್ಪಟ್ಟಿತು.

**ಕಿಂಗ್ ಜೇಮ್ಸ್ ಅಧಿಕೃತ ಭಾಷಾಂತರ:**

ವ್ಯಕ್ತಿಗಳು ಸತ್ಯವೇದವನ್ನು ಭಾಷಾಂತರಿಸಿದ್ದಕ್ಕೆ ಅನೇಕರು ದೋಷಾರೋಪಣೆ ಮತ್ತು ಕೆಲವರು ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದರು. ಮೊದಲನೇ ಅರಸನಾದ ಜೇಮ್ಸ್‌ನು ನಲವತ್ತೇಳು ವೇದ ಪಂಡಿತರಿಗೆ ಭಾಷಾಂತರಿಸುವ ಜವಾಬ್ದಾರಿಯ ಕೆಲಸವನ್ನು ವಹಿಸಿದನು. ಮೂರು ವರ್ಷಗಳ ಸತತ ಪ್ರಯತ್ನದಿಂದ ಕಿಂಗ್ ಜೇಮ್ಸ್ ಭಾಷಾಂತರವು ಕ್ರಿ.ಶ. 1611 ರಲ್ಲಿ ಪ್ರಕಟವಾಯಿತು. ಇಂದಿನ ವರೆಗೂ ಈ ಸತ್ಯವೇದವನ್ನು ಉಪಯೋಗಿಸುತ್ತಿರುವರು. ಮಾತ್ರವಲ್ಲದೆ ಆಂಗ್ಲ ಭಾಷೆಗೆ ಈ ಸತ್ಯವೇದವು ಕಿರೀಟಪ್ರಾಯವಾಗಿ 'ಅಧಿಕೃತ ಭಾಷಾಂತರ" ವೆಂದು ಸನ್ಮಾನಿಸಲ್ಪಟ್ಟಿತ್ತು. ಆದರೂ ಕಿಂಗ್ ಜೇಮ್ಸ್ ಭಾಷಾಂತರವು ದೋಷರಹಿತವಾಗಿರಲಿಲ್ಲ. ಹತ್ತೊಂಬತ್ತನೆ ಶತಮಾನದ ಮಧ್ಯಭಾಗದಲ್ಲಿ ಸತ್ಯವೇದದ ಪುರಾತನ ಪ್ರತಿಗಳು ದೊರೆತ ಕಾರಣ ಮತ್ತು ಸಂಶೋಧನೆಗಳಿಂದ ಕಿಂಗ್ ಜೇಮ್ಸ್ ಭಾಷಾಂತರವು ಪ್ರಯೋಗಕ್ಕೆ ಕ್ರಿ.ಶ. 1901 ರಲ್ಲಿ ಅಮೇರಿಕನ್ ಸ್ಟ್ಯಾಂಡರ್ಡ್ ಭಾಷಾಂತರವು ಬಳಕೆಗೆ ಬಂದಿತು. 1952ರಲ್ಲಿಪರಿಷ್ಕೃತವಾದ ಸ್ಟ್ಯಾಂಡರ್ಡ್ ಭಾಷಾಂತರವು ಪ್ರಕಟಿಸಲ್ಪಟ್ಟಿತು. ಇಂದು ನಮ್ಮ ಉಪಯೋಗಕ್ಕೆ ಅನೇಕ ಆಧುನಿಕ ಆಂಗ್ಲ ಭಾಷೆಯ ಸತ್ಯವೇದಗಳಿವೆ. ಸಾಧಾರಣ ಜನರಿಗೆ ಸತ್ಯವೇದದ ಮೂಲಭಾಷೆಯ ಅರ್ಥ ಗ್ರಹಿಸಲು ಕಷ್ಟಕರವಾದ ಕಾರಣ 1975ರಲ್ಲಿ ಮೂಲಭಾಷೆಯ ಸ್ಪಷ್ಟವಾದ ಹಾಗೂ ಅರ್ಥಗರ್ಭಿತವಾದ ಆಧುನಿಕ ಆಂಗ್ಲ ಭಾಷೆಗೆ ತರ್ಜುಮೆ ಮಾಡಲು ಪ್ರಯತ್ನಿಸಲಾಯಿತು. ಈ ಭಾಷಾಂತರದ ಸತ್ಯವೇದವನ್ನು ಎಲ್ಲರಿಗೂ ಉಪಯುಕ್ತವಾಗುವ ಹಾಗೆ ಬಹು ಜಾಗ್ರತೆಯಿಂದ ಭಾಷಾಂತರಿಸಲಾಯಿತು. ಈ ಸತ್ಯವೇದವೇ" ಗುಡ್ ನ್ಯೂಸ್ ಬೈಬಲ್" (Good News Bible).

ಮುಂದುವರಿಯುವದು...

**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

ಯೆಹೋವನು ನ್ಯಾಯವನ್ನು ಮೆಚ್ಚುವವನು; ತನ್ನ ಭಕ್ತರನ್ನು ಎಂದಿಗೂ ಕೈಬಿಡುವವನಲ್ಲ
(ಕೀರ್ತ. 37:28).

# ದೇವರನ್ನೇ ಆತುಕೋ

ಕರ್ತನಾದ ಯೇಸುಕ್ರಿಸ್ತನ ಸುಮಧುರವಾದ ನಾಮದಲ್ಲಿ ನಿಮ್ಮೆಲ್ಲರಿಗೂ ವಂದನೆಗಳು.

ಪ್ರಿಯರೇ, ತನಗೆ ವಿರುದ್ಧವಾಗಿ ಸಮಸ್ಯೆಗಳು, ಹೋರಾಟಗಳು, ಪ್ರತಿಕೂಲಗಳು ಬಂದಾಗಲೂ ಕೂಡಾ ಇನ್ನೇನು ಭಯದ ಕಾರ್ಮೋಡ ಪ್ರವಾದಿಯಾದ ಹಬಕ್ಕೂಕನಿಗೆ ಮುತ್ತಿದಾಗ್ಯೂ ಕೂಡಾ ನೋಡು ನೋಡುತ್ತಿದ್ದ ಹಾಗೆ ಅವುಗಳ ಮಧ್ಯದಲ್ಲಿ ಭಯಬ್ರಾಂತನಾಗದೆ ಭರವಸೆವುಳ್ಳವನಾಗಿ ದೇವರನ್ನು ಆತುಕೊಳ್ಳುತ್ತಾ **"ಆಹಾ, ಅಂಜೂರವು ಚಿಗುರದಿದ್ದರೂ ದ್ರಾಕ್ಷಾಲತೆಗಳಲ್ಲಿ ಹಣ್ಣು ಸಿಕ್ಕದಿದ್ದರೂ ಎಣ್ಣೆಮರಗಳ ಉತ್ಪತ್ತಿಯೂ ಶೂನ್ಯವಾದರೂ ಹೊಲಗದ್ದೆಗಳು ಆಹಾರವನ್ನು ಕೊಡದೆಹೋದರೂ ಹಿಂಡು ಹಟ್ಟಿಯೊಳಗಿಂದ ನಾಶವಾದರೂ ಮಂದೆಯು ಕೊಟ್ಟಿಗೆಗಳೊಳಗೆ ಇಲ್ಲದಿದ್ದರೂ ನಾನು ಯೆಹೋವನಲ್ಲಿ ಉಲ್ಲಾಸಿಸುವೆನು, ನನ್ನ ರಕ್ಷಕನಾದ ದೇವರಲ್ಲಿ ಆನಂದಿಸುವೆನು. ಕರ್ತನಾದ ಯೆಹೋವನೇ ನನ್ನ ಬಲ; ಆತನು ನನ್ನ ಕಾಲನ್ನು ಜಿಂಕೆಯ ಕಾಲಿನಂತೆ ಚುರುಕುಮಾಡಿ ನನ್ನ ಉನ್ನತಪ್ರದೇಶಗಳಲ್ಲಿ ನನ್ನನ್ನು ನಡಿಸುತ್ತಾನೆ"** (ಹಬ. 3:17–19). ಎಂಬುದಾಗಿ ನಂಬಿಕೆಯಿಂದ ಸ್ತೋತ್ರಮಾಡಿದನು. ಸಮಸ್ಯೆ, ಹೋರಾಟ, ಪ್ರತಿಕೂಲಗಳು ಎದ್ದುಬರುವಾಗ ಮುಂದೇನು ಕಾದಿದೆ ಎಂಬ ಭಯ ನಿಮ್ಮನ್ನು ಆವರಿಸುವಾಗ ಸೋತು ಹೋಗಬೇಡಿ ಬದಲಾಗಿ ಕರ್ತನನ್ನೇ ಆತುಕೊಂಡವರಾಗಿ ಅವುಗಳ ಮಧ್ಯದಲ್ಲಿ ನೀವು ನಂಬಿಕೆಯುಳ್ಳವರಾಗಿ ಸ್ತೋತ್ರ ಮಾಡುವುದಾದರೆ ಕರ್ತನು ನಿಮಗಾಗಿ ಅದ್ಭುತವನ್ನು ಮಹಿಮಾತಿಶಯವಾದ ಕಾರ್ಯಗಳನ್ನು ಮಾಡಲು ಶಕ್ತನಾಗಿದ್ದಾನೆ.

ನೀವು ಎಲ್ಲಿಯವರೆಗೆ ಸಂಪತ್ತಿನ ಮೇಲೆಯೂ ವ್ಯಕ್ತಿಗಳ ಮೇಲೆ ಆತುಕೊಳ್ಳುತ್ತಿರೋ ಅಲ್ಲಿಯವರೆಗೆ ಕರ್ತನು ನಿಮ್ಮನ್ನು ನಿಮ್ಮ ಮಾರ್ಗದಲ್ಲಿ ನಿದ್ರೆ ಮಾಡುವಂತೆ ಬಿಡುತ್ತಾನೆ. ಆಗ ನೀವು ಆತನ ಸಹಾಯಕ್ಕಾಗಿ ಪ್ರಾರ್ಥಿಸಿದರೂ ಕರ್ತನು ನಿಮಗೆ ಉತ್ತರಿಸಲು ಸಾಧ್ಯವಿಲ್ಲ. ಯೆಹೂದದ ಅರಸನಾದ ಆಸನು ದೇವರಿಂದ ಅನೇಕ ಸಾರಿ ಸಹಾಯ ಹೊಂದಿದಾಗ್ಯೂ ಕೂಡಾ ತನ್ನ ಕಾಲಿಗೆ ಬಹು ಕಠಿಣವಾದ ರೋಗ ತಗುಲಿದಾಗ ಯೆಹೋವನ ಸಹಾಯವನ್ನು ಕೋರದೆ ವೈದ್ಯರ ಸಹಾಯವನ್ನೇ ಕೋರಿದನು (1 ಪೂರ್ವ. 16:12). ಇಲ್ಲಿ ಆಸನು ವೈದ್ಯರಿಂದ ಉಪಚರಿಸಲ್ಪಟ್ಟದ್ದು ದೋಷವಲ್ಲ ಆದರೆ ವೈದ್ಯರನ್ನು ಆತುಕೊಂಡದ್ದು ತನ್ನ ಜೀವಿತಕ್ಕೆ ಮುಳುವಾಗಲು ಕಾರಣವಾಯಿತು.

ಪ್ರವಾದಿಯಾದ ಎಲೀಯನು **"ಯೆಹೋವನ ಅಪ್ಪಣೆಯಂತೆ ಯೊರ್ದನಿನ ಪೂರ್ವಕ್ಕಿರುವ ಕೆರೀತ್ ಹಳ್ಳದಲ್ಲಿ ವಾಸಿಸಿದನು. ಕಾಗೆಗಳು ಅವನಿಗೆ ಪ್ರಾತ:ಕಾಲದಲ್ಲಿಯೂ ಸಾಯಂಕಾಲದಲ್ಲಿಯೂ ರೊಟ್ಟಿ, ಮಾಂಸ ಇವುಗಳನ್ನು ತಂದುಕೊಡುತ್ತಿದ್ದವು. ಅವನು ಇವುಗಳನ್ನು ತಿನ್ನುತ್ತಿದ್ದನು; ಹಳ್ಳದ ನೀರು ಅವನಿಗೆ ಪಾನವಾಗಿತ್ತು. ದೇಶದಲ್ಲಿ ಮಳೆಯಿಲ್ಲದ್ದರಿಂದ ಕೆಲವು ದಿವಸಗಳಾದ ನಂತರ ಹಳ್ಳವು ಬತ್ತಿಹೋಯಿತು"** (1 ಅರಸು. 17:7).

ಇಲ್ಲಿ ಎಲೀಯನಿಗೋಸ್ಕರ ದೇವರು ಕಿತ್ತು ತಿನ್ನುವಂಥ ಸ್ವಭಾವವುಳ್ಳ ಹಳ್ಳಕೊಳ್ಳದ ಕಾಗೆಯನ್ನು ಸಂಪೂರ್ಣವಾಗಿ ಮಾರ್ಪಡಿಸಿ ದಿನದ ಎರಡು ಹೊತ್ತು ಆಹಾರವನ್ನು ಕೊಡುವುದಕ್ಕೆ ಹೀಗೆ ಅನೇಕ ದಿನಗಳು ಮುಂದುವರಿಯಿತು. ಈಗ ಎಲೀಯನು ದೇವರ ಮೇಲೆ ಆತುಕೊಳ್ಳುವುದಕ್ಕೆ ಬದಲಾಗಿ ಕಾಗೆಯ ಮೇಲೂ ಹಳ್ಳದ ಮೇಲೂ ಆತುಕೊಳ್ಳುವ ಅಪಾಯದಲ್ಲಿದ್ದನು. ಇಂಥಾ ಸಂದರ್ಭದಲ್ಲಿ ದೇವರು ವ್ಯವಸ್ಥಿತವಾದ ಮಾರ್ಗವನ್ನು ಸಿದ್ಧಮಾಡುತ್ತಾನೆ. ಇಷ್ಟರವರೆಗೆ ಸಾಕಿ ಸಲುಹಿದ ಕಾಗೆಗಳು ನಿಲ್ಲಿಸಲ್ಪಟ್ಟಿತ್ತು ಮತ್ತು ಹಳ್ಳದ ನೀರು ಬತ್ತಿಹೋಯಿತು. ಈಗ ಐಶ್ವರ್ಯವಂತನ ಮನೆಗೆ ಕಳುಹಿಸಲ್ಪಡದೆ ಮುಪ್ಪಿನ ನಿಸ್ಸಾಯಕವುಳ್ಳ ಚಾರೆಪ್ತಾ ವಿಧವೆಯ ಮನೆಗೆ ಕಳುಹಿಸಲ್ಪಟ್ಟನು.

ದೇವರ ಮಾರ್ಗಗಳು ನಿಮ್ಮ ಮಾರ್ಗಗಳಿಗಿಂತ ತುಂಬಾ ವ್ಯತ್ಯಾಸವುಳ್ಳದಾಗಿದೆ **" ಯೆಹೋವನು ಹೀಗೆನ್ನುತ್ತಾನೆ ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳಲ್ಲ, ನಿಮ್ಮ ಮಾರ್ಗಗಳು ನನ್ನ ಮಾರ್ಗಗಳಲ್ಲ. ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ನಿಮ್ಮ ಮಾರ್ಗಗಳಿಗಿಂತ ನನ್ನ ಮಾರ್ಗಗಳೂ ನಿಮ್ಮ ಆಲೋಚನೆಗಳಿಗಿಂತ ನನ್ನ ಆಲೋಚನೆಗಳೂ ಅಷ್ಟು ಉನ್ನತವಾಗಿವೆ"** (ಯೆಶಾ. 55:8–9). ಈ ಎಲೀಯನ ಮೂಲಕವಾಗಿ ಚಾರೆಪ್ತಾ ವಿಧವೆಯು ಆಶೀರ್ವದಿಸಲ್ಪಡ ಬೇಕಾಗಿತ್ತು. ಆಕೆಯ ಮಗನು ಜೀವದಿಂದ ಎಬ್ಬಿಸಲ್ಪಡಬೇಕಾಗಿತ್ತು. ಬರವಿದ್ದ ಪ್ರದೇಶದಲ್ಲಿ ಮಳೆ ಸುರಿಸಲ್ಪಡುವುದಕ್ಕೂ ಈಜೆಬೆಲಳಿಂದ ಪೋಷಣೆಹೊಂದುವ ಬಾಳನ ನಾನೂರೈವತ್ತು ಮಂದಿ, ಅಶೇರ ದೇವತೆಯ ನಾನೂರು ಮಂದಿ ಪ್ರವಾದಿಗಳನ್ನು ಕರ್ಮೆಲ್ ಬೆಟ್ಟದಲ್ಲಿ ಕರಿಸಿ ಜೀವಸ್ವರೂಪನಾದ ದೇವರು

ಯೆಹೋವನ ಆಶೀರ್ವಾದವು ಯಾರಿಗಿರುವದೋ ಅವರು ದೇಶವನ್ನು ಅನುಭವಿಸುವರು (ಕೀರ್ತ. 37:22).

ಯಾರು ಎಂಬುದಾಗಿ ಪ್ರಕಟಪಡಿಸಿ ಅವರನ್ನು ಸಂಪೂರ್ಣವಾಗಿ ನಾಶಪಡಿಸಿ ಹಾಳಾಗಿ ಬಿದ್ದ ಯೆಹೋವನ ವೇದಿಯನ್ನು ತಿರುಗಿ ಕಟ್ಟಿಸುವುದಕ್ಕೂ ಮುರಿದು ಬಿದ್ದ ದೇವಜನರ ಸಂಬಂಧವನ್ನು ಪುನರುಸ್ಥಾಪಿಸುವುದಕ್ಕೂ ನಿಂಷಿಯ ಮಗನಾದ ಯೇಹುವನ್ನು ಇಸ್ರಾಯೇಲ್ಯರ ಅರಸನನ್ನಾಗಿಯೂ ಶಾಫಾಟನ ಮಗನೂ ಆದ ಎಲೀಷನನ್ನು ತನಗೆ ಬದಲಾಗಿ ಪ್ರವಾದಿಯನ್ನಾಗಿಯೂ ಅಭಿಷೇಕಿಸುವುದಕ್ಕಾಗಿ ದೇವರಿಗೆ ಒಂದು ಪದ್ಧತಿ ಇತ್ತು.

ಪ್ರಿಯರೇ, ಇವತ್ತು ನಿಮ್ಮ ಕುರಿತಾಗಿ ದೇವರಿಗೆ ದೊಡ್ಡ ಯೋಜನೆ ಇದೆ. **"ನಿರೀಕ್ಷೆಯಿರಲಿ ಎಂದು ನಾನು ನಿಮ್ಮ ವಿಷಯದಲ್ಲಿ ಮಾಡಿಕೊಳ್ಳುತ್ತಿರುವ ಆಲೋಚನೆಗಳನ್ನು ನಾನೇ ಬಲ್ಲೆನು; ಅವು ಅಹಿತದ ಯೋಚನೆಗಳಲ್ಲ, ಹಿತದ ಯೋಚನೆಗಳೇ"** (ಯೆರೆ. 29:11). ಆದರೆ ಯಾವುದರ ಮೇಲೆ ಆತುಕೊಳ್ಳುತ್ತೇವೆಂಬುದು ಮುಖ್ಯವಾಗಿದೆ. ಅನೇಕ ದಿನಗಳವರೆಗೆ ಸಾಕಿ ಸಲುಹಿದ ಕಾಗೆಗಳು ಬರುವುದು ನಿಂತಿರಬಹುದು ಅಂದ ಮಾತ್ರಕ್ಕೆ ಎಲ್ಲಾ ಮುಗಿಯಿತು ಅಂತ ತಿಳುಕೊಳ್ಳಬೇಡಿ ಅವತ್ತಿನಿಂದಲೇ ನಿಮ್ಮ ಜೀವಿತದಲ್ಲಿ ವಿಶೇಷವಾದ ಅತಿಶಯ ದಿನಗಳು ಮುಂದಿವೆ ಎಂದು ತಿಳುಕೊಳ್ಳಿರಿ. ಇದುವರೆಗೆ ಸಹಾಯ ಮಾಡುತ್ತೇನೆಂದು ಹೇಳಿದ ವ್ಯಕ್ತಿ ಈಗ ನಿಲ್ಲಿಸಿರಬಹುದು ಅದು ದೇವರೆ ನಿಲ್ಲಿಸಿರಬಹುದು ಹಾಗಾಗಿ ನೀವು ಅವರ ಮೇಲೆ ಗುಣುಗುಟ್ಟುವುದು ಸರಿಯಲ್ಲ, ಇದು ಯಾತಕ್ಕಾಗಿ ಆಯಿತು ನೀವು ಕರ್ತನನ್ನೇ ಆತುಕೊಳ್ಳುವುದಕ್ಕಾಗಿ. **"ನಾನೇ ಯೆಹೋವನು; ಇದೇ ನನ್ನ ನಾಮವು; ನನ್ನ ಮಹಿಮೆಯನ್ನು ಮತ್ತೊಬ್ಬನಿಗೆ ಸಲ್ಲಗೊಡಿಸೆನು, ನನ್ನ ಸ್ತೋತ್ರವನ್ನು ವಿಗ್ರಹಗಳ ಪಾಲು ಮಾಡೆನು"** (ಯೆಶಾ. 42:8).

ವ್ಯಕ್ತಿಗಳ ಮೇಲೆ ಹಣದ ಮೇಲೆ ಆತುಕೊಳ್ಳುವ ಈ ವ್ಯಾಮೋಹದಿಂದ ಹೊರಬರಬೇಕು. ದೇವರು ನಮ್ಮನ್ನು ಮೇಲಕೆತ್ತುವ ಮೊದಲು ಹಾಗೂ ನಮ್ಮಿಂದ ಆತನ ಉದ್ದೇಶವನ್ನು ನೇರವೇರಿಸುವ ಮೊದಲು ಆತನು ನಮ್ಮನ್ನು ಶೂನ್ಯವಾದ ಸ್ಥಳಕ್ಕೆ ತರುವನು. ಇದು ಈಗ ನಮಗೆ ಅರ್ಥವಾಗದೆ ಇರಬಹುದು ಆದರೆ ಎಲೀಯನು ಹೇಗೆ ದೇವರ ನಡಿಸುವಿಕೆಗೆ (ತರಬೇತಿ) ತನ್ನನ್ನು ಬಿಟ್ಟುಕೊಟ್ಟನೋ ಅದೇ ರೀತಿಯಲ್ಲಿ ನೀವು ನಿಮ್ಮನ್ನೇ ಕರ್ತನಿಗಾಗಿ ಬಿಟ್ಟು ಕೊಡುವುದಾದರೆ ದೇವರ ಯೋಜನೆಗಳು ನಿಮ್ಮ ಜೀವಿತದಲ್ಲಿ ನೇರವೇರಲು ಸಾಧ್ಯ. ಪ್ರಾರಂಭದ ಇಕ್ಕಟ್ಟಿನಲ್ಲಿ ಎಲೀಯನಿಗೆ ಕಾಗೆ, ಹಳ್ಳ, ವಿಧವೆಯನ್ನು ಸಿದ್ಧಪಡಿಸಿದು ಮಾತ್ರವಲ್ಲ ತನ್ನ ಸೇವಾ ಮಾರ್ಗದಲ್ಲಿ ಆ ಸಂಕಷ್ಟ ಅನುಭವದಲ್ಲಿ ಬಳಲಿ ಹೋದಾಗ ದೇವದೂತನ ಮೂಲಕವಾಗಿ ಉಪಚರಿಸಲ್ಪಟ್ಟನು. ಇದು ಮಾನುಷಿಕವಾದ ಬುದ್ಧಿಯಿಂದ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಪ್ರಿಯರೇ, ಅನೇಕ ಸಾರಿ ಒಂಟಿಗರಾಗಿ ಇಕ್ಕಟ್ಟು ಸಂಕಷ್ಟಗಳನ್ನು ಹಾದು ಹೋಗುವ ಅನುಭವ ಬರಬಹುದು ಅವುಗಳ ಮಧ್ಯದಲ್ಲಿ ದೇವರಿಗೆ ನೀವು ನಂಬಿಗಸ್ತರಾಗುವುದಾದರೆ ಪರಲೋಕವೇ ನಿಮ್ಮೊಂದಿಗೆ ಇದ್ದು ಕರ್ತನು ನಿಮ್ಮ ಮೂಲಕವಾಗಿ, ನಿಮ್ಮ ಸಾಮರ್ಥ್ಯಕ್ಕಿಂತ ಮಿಗಿಲಾಗಿ ಮಹತ್ತುಗಳನ್ನು, ಮಹಿಮಾತಿಶಯವಾದ ಕಾರ್ಯಗಳನ್ನು ಮಾಡಲು ಶಕ್ತನಾಗಿದ್ದಾನೆ.

ಹೌದು ಪ್ರಿಯರೇ, ಇವತ್ತು ಸ್ವಂತ ವ್ಯಾಪಾರ ನಡೆಸುತ್ತಿರಬಹುದು. ಅದೇ ನಿಮಗೆ ಭುಜಬಲವೆಂದು ಆತುಕೊಳ್ಳಬೇಡಿರಿ. ಪ್ರಾರಂಭದಲ್ಲಿ ಅನೇಕರು ಕೆಲಸ ಇಲ್ಲ. ಪ್ರಾರ್ಥನೆ ಮಾಡಿ ಎಂಬುದಾಗಿ ಕೇಳುತ್ತಾರೆ ಕೆಲಸ ಸಿಕ್ಕಿದ ಮೇಲೆ ದೇವರನ್ನೇ ಮರೆತು ಬಿಡುವುದನ್ನು ಈ ದಿನಮಾನಗಳಲ್ಲಿ ಕಾಣುತ್ತೇವೆ. ಸರಿಯಾಗಿ ಆರಾಧನೆಗೆ ಬರುವುದಿಲ್ಲ, ವಿಶೇಷ ಕೂಟಗಳ ಆಸಕ್ತಿ ಇಲ್ಲದಿರುವುದು, ವಿಚಾರಿಸುವಾಗ ತುಂಬಾ ಬ್ಯುಸಿ ಇವತ್ತು ದುಡಿಯಲು ಆರೋಗ್ಯ, ಸಾರ್ಮಥ್ಯ, ಜ್ಞಾನ ಕೊಟ್ಟ ದೇವರನ್ನೇ ಮರೆತು ಬಿಡುವಂಥದು. ಪ್ರಿಯರೇ, ಒಂದು ವೇಳೆ ನಿಮ್ಮ ಆರೋಗ್ಯ ನಷ್ಟವಾದರೆ ಏನಾದರೂ ಮಾಡಲು ಸಾಧ್ಯವುಂಟೋ? ನಿಮಗೆ ಜೀವವನ್ನು, ಸಮೃದ್ಧಿಯನ್ನು ಕೊಟ್ಟ ದೇವರಿಗೆ ಆತನ ಸಭೆಗೆ (ಅಂಗಳದಲ್ಲಿ) ಬಂದು ಉಪಕಾರ ಸ್ತುತಿ ಮಾಡುವವರಾಗಿರಬೇಕು.

2 ಪೂರ್ವ. 12:1–7 ಈ ವಾಕ್ಯದಲ್ಲಿ ತಿಳುಕೊಳ್ಳುವಾಗ ರೆಹಬ್ಬಾಮನು ಎಲ್ಲಾ ಇಸ್ರಾಯೇಲ್ಯರು ಆಶೀರ್ವಾದ ಹೊಂದಿದ ಮೇಲೆ ದೇವರನ್ನು ಮರೆತು ಬಿಡುವುದನ್ನು ಕಾಣುತ್ತೇವೆ. ಇದರ ನಿಮಿತ್ತವಾಗಿ ದೇವರು ಅವರನ್ನು ಶತ್ರುವಿಗೆ ಬಿಟ್ಟುಬಿಟ್ಟನು ಎಂಬುದಾಗಿ ನೋಡುತ್ತೇವೆ. ಕೊನೆಗೆ ಪರಿಸ್ಥಿತಿ ಎದುರಾಗಿ ಬಂದಾಗ ದೇವರು ನ್ಯಾಯವಂತನೆಂದು ತಮ್ಮನ್ನು ತಗ್ಗಿಸಿಕೊಂಡರು ಎಂಬುದಾಗಿ ಕಾಣಬಹುದು.

ಪ್ರಿಯರೇ, ನಿಮ್ಮ ಜೀವಿತವು ಹಾಗೆ ಆಗಬಾರದು. ದೇವರನ್ನೇ ಆತುಕೊಳ್ಳಿ ಮತ್ತು ಕರ್ತನು ನಿಮ್ಮಗಾಗಿ ಮಾಡಿದ ಎಲ್ಲಾ ಮೇಲುಗಳನ್ನು ಆಶೀರ್ವಾದಗಳನ್ನು ಹೊಂದಿಕೊಳ್ಳಿರಿ.

ಕರ್ತನು ತಾನೇ ಚೀಯೋನಿನಿಂದ ಹೇರಳವಾಗಿ ನಿಮ್ಮನ್ನು ಆಶೀರ್ವದಿಸಲಿ.

ಯೆಹೋವನೇ, ನಿನ್ನ ನಿವಾಸವು ನನಗೆ ಎಷ್ಟೋ ಪ್ರಿಯ; ನಿನ್ನ ಪ್ರಭಾವಸ್ಥಾನವು ನನಗೆ ಇಷ್ಟ (ಕೀರ್ತ. 26:8).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 7760139148**

**ಓದುಗರಿಗೆ ವಿಶೇಷ ಸೂಚನೆ :**

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ <u>ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ</u> ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,
ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115 ಕರ್ನಾಟಕ, ಭಾರತ.
e: Editor_voiceofgod@hotmail.com
Website : www.divinegen.org

**ನಮ್ಮ ಕಛೇರಿ ವಿಳಾಸ :**
**ಡಿಜಿಎಂ ಬೇತೇಲ್ ಕಛೇರಿ,**
**ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.**
Ph: (0820) 2589070, 200 2781
E-mial: dgmofficial@gmail.com



# ಸ್ಥಳೀಯ ಮತ್ತು ವಿದೇಶ ಸುದ್ದಿ

- ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರ ಹಮೀದ್ ಅನ್ಸಾರಿ ಅವರನ್ನೇ 2ನೇ ಅವಧಿಗೆ ಉಪರಾಷ್ಟ್ರಪತಿ ಅಭ್ಯರ್ಥಿಯಾಗಿಸಲು ತೀರ್ಮಾನಿಸಿದೆ.
- ವಿಂಬಲ್ಡನ್‌ನಲ್ಲಿ ಫೆಡರರ್ ಮತ್ತೆ ವಿಂಬಲ್ಡನ್‌ನಲ್ಲಿ ವಿಜೃಂಭಿಸಿದ್ದಾರೆ. ಅತಿಥೇಯ ನಾಡಿನ ಆ್ಯಂಡಿ ಮರ್ರೆ ಅವರನ್ನು ಕೆಡವಿ ದಾಖಲೆ ಸಮಬಲದ 7ನೇ ವಿಂಬಲ್ಡನ್ ಪ್ರಶಸ್ತಿ ಗೆದ್ದ ಸಾಧನೆ ಮಾಡಿದ್ದಾರೆ. ಪೀಟ್ ಸಾಂಪ್ರಸ್ ಕೂಡ ಏಳು ಬಾರಿ ಇಲ್ಲಿ ಪ್ರಶಸ್ತಿ ಜಯಿಸಿದ್ದರು. ಫೆಡರರ್ 2003–2009 ಮತ್ತು ಈ ಬಾರಿ ವಿಂಬಲ್ಡನ್ ಪ್ರಶಸ್ತಿ ಜಯಿಸಿದ್ದಾರೆ. ಒಟ್ಟಾರೆ 17 ಬಾರಿ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದ ಸಾಧನೆ ಮಾಡಿದ್ದಾರೆ.
- ದೇಶದ ರಾಜಕೀಯದಲ್ಲಿ ಬೆನ್ನಲುಬಿಲ್ಲದ ತಥಾಕಥಿತ ನಾಯಕರ ಸಂಖ್ಯೆ ಹೆಚ್ಚುತ್ತಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಇತ್ತೀಚಿನ ದಿನಗಳಲ್ಲಿ ದೇಶದಲ್ಲಿ ಬೆನ್ನೆಲುಬಿಲ್ಲದ ತಥಾಕಥಿತ ರಾಜಕೀಯ ನಾಯಕರ ಸಂಖ್ಯೆ ಹೆಚ್ಚುತ್ತಿದ್ದು, ಇದರಿಂದ ತಾನೇನೂ ಅಚ್ಚರಿಗೆ ಒಳಗಾಗಿಲ್ಲ. ಈ ವಿಚಾರವಾಗಿ ಸಂಶೋಧನೆ ನಡೆಸಲು ಹೆಚ್ಚಿನ ಅವಕಾಶಗಳಿವೆ ಎಂಬುದು ನನ್ನ ಅಭಿಪ್ರಾಯ ಎಂದು ಅವರು ಅಂತಾರಾಷ್ಟ್ರೀಯ ಸಾಮಾಜಿಕ ತಾಣವಾಗಿರುವ ಫೇಸ್‌ಬುಕ್‌ನಲ್ಲಿ ಹೇಳಿಕೊಂಡಿದ್ದಾರೆ.
- ಅಸ್ಸಾಂ ಪ್ರವಾಹ ಬಲಿ 121ಕ್ಕೆ ಪ್ರವಾಹಗ್ರಸ್ತ ಅಸ್ಸಾಂನಲ್ಲಿ ಪರಿಸ್ಥಿತಿ ಗಂಭೀರವಾಗಿ ಮುಂದುವರಿದಿದ್ದು ಸಾವಿನ ಸಂಖ್ಯೆ 121ಕ್ಕೇರಿದೆ. ಇದೇ ವೇಳೆ ಅಪಾಯಮಟ್ಟವನ್ನು ಮೀರಿ ಹರಿಯುತ್ತಿರುವ ಬ್ರಹ್ಮಪುತ್ರಾ ಮತ್ತು ಅವರ ಉಪನದಿಗಳಲ್ಲಿ ನೀರಿನ ಮಟ್ಟ ಇಳಿಯುವ ಲಕ್ಷಣಗಳು ಕಾಣಿಸುತ್ತಿವೆ.
- ಅಮೆರಿಕದಲ್ಲಿ ಬಿಸಿ ಗಾಳಿ ಬೀಸುತ್ತಿದ್ದು ಈವರೆಗೆ ಬಿಸಲ ಝಳಕ್ಕೆ ಬಲಿಯಾದವರ ಸಂಖ್ಯೆ 40ಕ್ಕೆ ಏರಿದೆ. ಮಧ್ಯಪೂರ್ವ ಅಮೆರಿಕ ಮತ್ತು ಪೂರ್ವ ಕರಾವಳಿಯ ಪ್ರಮುಖ ನಗರಗಳಲ್ಲಿ ಉಷ್ಣಾಂಶ 100 ಡಿಗ್ರಿ ಫ್ಯಾರನ್ ಹೀಟ್(38 ಡಿಗ್ರಿ ಸೆಲ್ಶಿಯಸ್) ದಾಟಿದ್ದು ವಾಷಿಂಗ್ಟನ್‌ನಲ್ಲಿ 105 ಡಿಗ್ರಿ ಫ್ಯಾರನ್ ಹೀಟ್ ದಾಖಲೆ ಉಷ್ಣಾಂಶ ದಾಖಲಾಯಿತು. ಸೇಂಟ್ ಲೂಯಿ ಮತ್ತು ಇಂಡಿಯಾನಾ ಪೋಲಿಸ್‌ನಲ್ಲು ಉಷ್ಣಾಂಶ ಮೂರಂಕೆಯನ್ನು ದಾಟಿತು.

## ವಿಶೇಷ ಕೂಟಗಳು

**ದಿನಾಂಕ 21 ಸೆಪ್ಟೆಂಬರ್ 2012 ರಿಂದ 23ಸೆಪ್ಟೆಂಬರ್‌ವರೆಗೆ ಬೇತೇಲ್ ಚರ್ಚ್ ಶಂಕರ್‌ಪುರದಲ್ಲಿ ಸೇವಕರಾದ ಮೋಸಸ್ ಓರ್ಝೋ ರವರ ವಿಶೇಷ ಪ್ರಾರ್ಥನಾ ಕೂಟವನ್ನು ಏರ್ಪಡಿಸಲಾಗಿದೆ. ತಮಗೆಲ್ಲರಿಗೂ ಆದರದ ಸ್ವಾಗತವನ್ನು ಬಯಸುವ ಬೇತೇಲ್ ಚರ್ಚ್ ಶಂಕರಪುರ.**

## ವಿಶೇಷ ಪ್ರಾರ್ಥನೆ :

ಪ್ರತಿ ಶನಿವಾರ ಮಧ್ಯಾಹ್ನ 4–00ರಿಂದ 6–00 ಗಂಟೆಯವರೆಗೆ ಸ್ವಸ್ಥತೆಯ ಹಾಗೂ ಬಿಡುಗಡೆಯ ಆರಾಧನೆಯನ್ನು ಸಭಾಪಾಲಕರಾದ **ಸುನಿಲ್ ಜಾನ್ ಡಿ'ಸೋಜಾ** ಹಾಗೂ ತಂಡದವರ ನೇತೃತ್ವದಲ್ಲಿ ಡಿಜಿಎಮ್ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರದಲ್ಲಿ ನಡೆಯುತ್ತಿದೆ. ಆಸಕ್ತಿಯುಳ್ಳ ಪ್ರತಿಯೊಬ್ಬರಿಗೂ ಆದರದ ಸ್ವಾಗತ. ರೋಗಿಗಳಿಗಾಗಿ ವಿಶೇಷವಾಗಿ ಪ್ರಾರ್ಥಿಸಲಾಗುವುದು. ಬನ್ನಿರಿ ಯೇಸುಕ್ರಿಸ್ತನು ಮಾಡುವ ಅದ್ಭುತಗಳನ್ನು ಹೊಂದಿಕೊಳ್ಳಿರಿ.

**"ದೈವಹಿಡಿದ ಬಹಳ ಜನರನ್ನು ಆತನ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದನು"** (ಮತ್ತಾ. 8:16).

***ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :***

**9902334941, 9964070654, 9740985802**

ಯೆಹೋವನಲ್ಲಿ ಭಯಭಕ್ತಿಯುಳ್ಳವರ ಮೇಲೆ ಆತನ ದಯವು ಯುಗಯುಗಾಂತರಗಳವರೆಗೂ ಇರುತ್ತದೆ (ಕೀರ್ತ. 103:17).

# ರೂತಳ ಪುಸ್ತಕ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

**2) ಮಕ್ಕಳಿಗೆ ದೇವರ ಭಯವನ್ನು ಚೆನ್ನಾಗಿ ಕಲಿಸಿರಿ :** ನಾನು ಚಿಕ್ಕವಳಿದ್ದಾಗ ನಮ್ಮ ಸುತ್ತ ಮುತ್ತಲು ಅಷ್ಟೊಂದು ದೂರದರ್ಶನಗಳು ಇರಲಿಲ್ಲ. ಪ್ರತಿಯೊಂದು ಮನೆಯಲ್ಲಿ ಸಂಜೆ ಊಟಮಾಡಿ ಮುಗಿಸುವುದಕ್ಕಿಂತ ಮುಂಚೆ ಪ್ರಾರ್ಥನೆ ಹಾಗೂ ಆರಾಧನೆಯ ಶಬ್ದ ಕೇಳುತ್ತಾಇತ್ತು. ಇಂದು ಪರಿಸ್ಥಿತಿಯು ಬದಲಾಗಿದೆ. ಮಕ್ಕಳ ಜೊತೆಯಲ್ಲಿ ಹಿರಿಯರು ಹೆತ್ತವರು ಸೇರಿ ದೂರದರ್ಶನವನ್ನು ವೀಕ್ಷಿಸುತ್ತಾರೆ. ಮಾತ್ರವಲ್ಲ ಎಷ್ಟೋ ಮಕ್ಕಳಲ್ಲಿ ದೇವರ ಕುರಿತಾದ ಭಯ ಕೂಡ ಇಲ್ಲಾ. ಹಳೆ ಒಡಂಬಡಿಕೆಯಲ್ಲಿ ಯಾಜಕನಾದ ಎಲೀಯು ಎಲ್ಲರಿಗೂ ಉಪದೇಶಿಸಿದನು. ಆದರೆ ತನ್ನ ಸ್ವಂಥ ಮಕ್ಕಳಿಗೆ ಬೋಧಿಸಲಿಕ್ಕೆ ಅವನಿಂದ ಸಾಧ್ಯವಾಗಲಿಲ್ಲ. ಇದರಿಂದಾಗಿ ಅವನ ಮಕ್ಕಳು ತಪ್ಪಾದ ಮಾರ್ಗವನ್ನು ಹಿಡಿದರು ಒಂದು ಗಾದೆ ಇದೆ. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ ಎಂದು ಇದು ಎಲೀಯನ ಮಕ್ಕಳಲ್ಲಿ ಮಾತ್ರವಲ್ಲ ಇಂದು ನಮ್ಮೆಲ್ಲರ ಮಕ್ಕಳಲ್ಲಿಯೂ ಅನ್ವಯಿಸುವಂತದ್ದಾಗಿದೆ. ಪ್ರವಾದಿಯಾದ ಸಮುವೇಲನು ತನ್ನ ಮಕ್ಕಳನ್ನು ಸರಿಯಾದ ಮಾರ್ಗದಲ್ಲಿ ನಡೆಸಲು ಸಾಧ್ಯವಾಗಲಿಲ್ಲ ಎಂದು ದೇವರ ವಾಕ್ಯದ ಮೂಲಕವಾಗಿ ತಿಳಿದುಕೊಳ್ಳಬಹುದು. ಪ್ರೀತಿಯ ತಂದೆ ತಾಯಿಯವರ ಹೆತ್ತವರೇ, ಇಂದು ನಿಮ್ಮ ಮಕ್ಕಳಿಗೆ ದೇವರ ಭಯವನ್ನು ನೀವು ಕಲಿಸದೇ ಹೋದರೆ ಒಂದು ದಿನ ನಿಮ್ಮ ಮಕ್ಕಳ ಕುರಿತಾಗಿ ಪಶ್ಚಾತ್ತಾಪ ಪಡಬೇಕಾದೀತು. ಒಂದು ವಿಧವೆ ತಾಯಿಗೆ ಒಬ್ಬ ಶಾಲೆಗೆ ಹೋಗುವ ಚಿಕ್ಕ ಮಗನಿದ್ದ ಕಿತ್ತು ತಿನ್ನುವಂತ ಬಡತನವಿತ್ತು. ಈ ತಾಯಿ ಅಲ್ಲಿ ಇಲ್ಲಿ ಸ್ವಲ್ಪ ಕೆಲಸಮಾಡಿ ತನ್ನ ಮಗನನ್ನು ಸಾಕಿ ವಿದ್ಯಾಭ್ಯಾಸಕೊಟ್ಟು ಸಾಕುತ್ತಿದ್ದಳು. ಒಂದು ದಿನ ಮಗ ತಾಯಿಯ ಬಳಿಗೆ ಬಂದು ಪೆನ್ಸಿಲ್ ತೆಗೆದುಕೊಂಡು ಬಂದು ಹೇಳಿದ ನಾನು ಇನ್ನೊಂದು ಹುಡುಗನಿಂದ ಇದನ್ನು ಕದ್ದು ತಂದೆ. ತಾಯಿ ಈ ವಿಷಯವನ್ನು ಅಷ್ಟೊಂದು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ ಅದನ್ನು ನೀನು ಇಟ್ಟುಕೋ ಎಂದರು. ಹೀಗೆ ದಿನಗಳು ಕಳೆದಂತೆ ಒಂದು ದಿನ ಪೆನ್ನು, ರಬ್ಬರ್, ಪುಸ್ತಕ ಎಲ್ಲಾ ಕದ್ದುಕೊಂಡು ಬರುತ್ತಿದ್ದ ತಾಯಿ ಮಗನಿಗೆ ಒಂದು ದಿನ ಕೂಡ ಬೈಯಲಿಲ್ಲ ಹಾಗೂ ಮಗನ ತಪ್ಪು ತಿದ್ದಲಿಲ್ಲ ಹೀಗೆ ಈ ಹುಡುಗ ದೊಡ್ಡವನಾಗಿ ದೊಡ್ಡ ಕಳ್ಳನಾದ. ಒಂದು ದಿನ ಒಂದು ಕಡೆ ದರೋಡೆ ಮಾಡುವಾಗ, ಒಂದು ಕೊಲೆ ಮಾಡಿದಾಗ ಪೋಲಿಸ್ ಅಧಿಕಾರಿಗಳು ಅವನನ್ನು ಹಿಡಿದರು ನ್ಯಾಯಾಲಯದಲ್ಲಿ ಅವನ ಆರೋಪ ಸಾಬೀತಾಯಿತು. ಕೊನೆಗೆ ಅವನಿಗೆ ಮರಣದಂಡನೆಯು ಶಿಕ್ಷೆಯಾಯಿತು ಮರಣದಂಡನೆಗಿಂತ ಮುಂಚೆ ಪೋಲಿಸ್ ಅಧಿಕಾರಿಗಳು ಅವನ ಬಳಿ ನಿನ್ನ ಕೊನೆಯ ಆಸೆ ಏನು ಎಂದು ಕೇಳಿದಾಗ ಅವನು ನನ್ನ ತಾಯಿಯನ್ನು ನೋಡಬೇಕು ಎಂದು ಹೇಳಿದ ಪೋಲಿಸ್ ಅಧಿಕಾರಿಗಳು ಅವನ ತಾಯಿಯನ್ನು ತೋರಿಸಿದಾಗ ಕೋಪದಿಂದ ಪೋಲಿಸ್ ಅಧಿಕಾರಿಗಳೇ ಗಲ್ಲಿಗೇರಿಸುವುದಾದರೆ ಮೊದಲು ನನ್ನ ತಾಯಿಯನ್ನು ಗಲ್ಲಿಗೇರಿಸಿರಿ ಯಾಕೆಂದರೆ ನಾನು ಚಿಕ್ಕವನಿರುವಾಗ ಮೊದಲ ದಿನ ಸ್ಕೂಲ್‌ನಿಂದ ಪೆನ್ಸಿಲ್ ಕದ್ದು ತಂದಾಗ ನನ್ನ ತಾಯಿ ನನ್ನನ್ನು ತಿದ್ದಲಿಲ್ಲ. ಇದರಿಂದಾಗಿ ನಾನು ಕಳ್ಳನು, ಕೊಲೆಗಾರನು ಆಗಿ ಮಾರ್ಪಟ್ಟೆ ಎಂದು ಜೋರಾಗಿ ಕೂಗಾಡಿದನು. ನನ್ನ ಪ್ರಿಯ ಹೆತ್ತವರೇ, ತಂದೆ ತಾಯಿಯಾದವರೆ ನಿಮ್ಮ ಮಕ್ಕಳು ತಪ್ಪು ಮಾಡಿದಾಗ ನೀವು ತಿದ್ದುವೀರಾ? ನಿಮ್ಮನ್ನು ಪರೀಕ್ಷೆ ಮಾಡಿಕೊಳ್ಳಿರಿ.

ನಮ್ಮ ಮಕ್ಕಳು ಹಿರಿಯರಿಗೆ ಬೈಯುವಾಗ ಎದುರು ಮಾತನಾಡುವಾಗ, ಸ್ಕೂಲ್ ಟೀಚರ್‌ಗೆ ವಿರುದ್ಧ ಮಾತಾನಾಡುವಾಗ, ನೀವು ಮಕ್ಕಳಿಗೆ ಸಪೋರ್ಟ್ ಕೊಡುತ್ತೀರಾ ಅಥವಾ ಮಕ್ಕಳನ್ನು ತಿದ್ದುತ್ತೀರಾ? **"ಮಕ್ಕಳಿರಾ ಬನ್ನಿರಿ ನನ್ನ ಮಾತನ್ನು ಕೇಳಿರಿ ನಾನು ಯೆಹೋವನ ಭಯವನ್ನು ನಿಮಗೆ ಕಲಿಸುವೆನು.** ಅನೇಕ ಹೆತ್ತವರಿಗೆ ಅವರ ಮಕ್ಕಳ ತಪ್ಪಿನ ಕುರಿತು ಹೇಳುವಾಗ ತುಂಬಾ ಕೋಪ ಬರುತ್ತದೆ. ಆಗ ಮಕ್ಕಳಿಗೆ ತಪ್ಪು ಮಾಡಲು ಇನ್ನು ಬಲ ಬರುತ್ತದೆ. ತಪ್ಪು ತಪ್ಪೇ ಅದನ್ನು ತಿದ್ದಿ ಸರಿ ದಾರಿಗೆ ತರುವಂಥದ್ದು ಹೆತ್ತವರ ಜವಾಬ್ದಾರಿಯಾಗಿದೆ. ಹೆತ್ತವರು ಮಕ್ಕಳಿಗೆ ದೇವರ ಭಯ ಕಲಿಸುವುದು ಹೇಗೆ?

1. ಮಕ್ಕಳು ತಪ್ಪು ಮಾಡುವಾಗ ಕೂಡಲೇ ತಿದ್ದಿರಿ.
2. ಮಕ್ಕಳು ತಪ್ಪು ಮಾಡುವಾಗ ಶಿಕ್ಷಿಸಲು ಹಿಂದೆ ಮಾಡಬೇಡಿ.
3. ಮಕ್ಕಳ ಮುಂದೆ ತಂದೆ ತಾಯಿ ಮಾದರಿಯಾಗಿರಿ.
4. ತಂದೆ ತಾಯಿ ಮನೆಯಲ್ಲಿ ದೇವರ ಭಯದಲ್ಲಿ ಜೀವಿಸಿರಿ.
5. ಮಕ್ಕಳಿಗೆ ದೇವರ ಭಯದಲ್ಲಿ ನಡಕೊಳ್ಳುವುದನ್ನು ಕಲಿಸಿರಿ.
6. ಮಕ್ಕಳಿಗೆ ದೇವರ ವಾಕ್ಯದ ಮೂಲಕ ಎಚ್ಚರಿಸಿರಿ (ಫಿಲಿ. 2:15–16).
7. ಸತ್ಯವೇದದಲ್ಲಿ ದೇವರಿಗೆ ಭಯಪಟ್ಟು ಜೀವಿಸಿದ ವ್ಯಕ್ತಿಗಳು ಹೇಗೆ ಕರ್ತನಿಂದ ಆಶೀರ್ವಾದ ಹೊಂದಿದರು ಎಂದು ಮಕ್ಕಳಿಗೆ ತಿಳಿಸಿರಿ.

ಕರ್ತನು ಚೀಯೋನಿನಿಂದ ಹೇರಳವಾಗಿ ಆಶೀರ್ವಾದಿಸಲಿ.

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**– ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

ಒಂದು ಕಾಲ ಉಂಟು, ನಿನ್ನ ನಿರೀಕ್ಷೆಯು ನಿರರ್ಥಕವಾಗದು

(ಜ್ಞಾನೋ. 23:18).